ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಪುಟ 6 ಸಂಚಿಕೆ 14 ಏಪ್ರಿಲ್ 1, 1984 ಬೆಲೆ 60 ಪೈಸೆ

"ಮೇ ವಿಶೇಷಾಂಕ" ಕುರಿತು

ಐಕ್ಯರಂಗವು 6-5-84 ರಂದು ಮೇ 1 ರ ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆಯ ಅಂಗವಾಗಿ ವಿಶೇಷ ಸಂಚಿಕೆಯೊಂದನ್ನು ಪ್ರಕಟಿಸುತ್ತದೆ. ಸಂಚಿಕೆಯು ಸುಮಾರು 32 ಪುಟಗಳನ್ನು ಹೊಂದಿದ್ದು ಅದರ ಬೆಲೆ 1-50 ರೂಪಾಯಿ ಆಗಿರುತ್ತದೆ.

ವಿಶೇಷ ಸಂಚಿಕೆಗಾಗಿ ನಮ್ಮ ಓದುಗರಿಂದ ಕಥೆ, ಕವನ, ಲೇಖನಗಳು, ಕಿರು ಬರಹಗಳು ಇತ್ಯಾದಿಗಳನ್ನು ಆಹ್ವಾನಿಸುತ್ತೇವೆ. ಏಪ್ರಿಲ್ 20 ರೊಳಗೆ ನಮಗೆ ತಲುಪುವಂತಿರಲಿ.

ಏಜೆಂಟರು ತಮಗೆ ಅಗತ್ಯವಿರುವ ಪ್ರತಿಗಳಿಗಾಗಿ ಏಪ್ರಿಲ್ 15 ರೊಳಗೆ ತಿಳಿಸಿದಲ್ಲಿ ಮಾತ್ರ ಪರಿಗಣಿಸಲಾಗುತ್ತದೆ. ತಮಗೆ ಬೇಕಿರುವ ಪ್ರತಿಗಳಿಗಾಗಿ ಮುಂಗಡ ಹಣವನ್ನು ಕಳಿಸಬೇಕೆಂದು ವಿನಂತಿಸುತ್ತೇವೆ.

ವ್ಯವಸ್ಥಾಪಕ ಸಂಪಾದಕರು

ಬಂದರು ಕೆಲಸಗಾರರ ಮಹಾ ಮುಷ್ಕರ

ಭಾರತ ದೇಶದ 10 ಮುಖ್ಯ ಬಂದರುಗಳಾದ ಮುಂಬಯಿ, ಕಲ್ಕತ್ತಾ, ಮದ್ರಾಸ್, ವಿಶಾಖಪಟ್ಣ, ಕೊಚ್ಚಿನ್, ಮಾರ್ಗೋವಾ, ಕಾಂಡ್ಲಾ, ಮಂಗಳೂರು, ಟುಟಿಕೋರಿನ್, ಮತ್ತು ಪಾರದೀಪಗಳಲ್ಲಿ ಕೆಲಸ ಮಾಡುತ್ತಿರುವ ಲಕ್ಷಾವಧಿ ಕಾರ್ಮಿಕರು ಮಾರ್ಚ್ 15 ರಿಂದ ಮುಷ್ಕರದಲ್ಲಿದ್ದಾರೆ. ರಾಷ್ಟ್ರೀಯ ಕಾಂಗ್ರೆಸ್ (ಐಎನ್‌ಟಿಯುಸಿ)ಯನ್ನೊಳಗೊಂಡ ನಾಲ್ಕು ಕೇಂದ್ರೀಯ ಮಹಾಮಂಡಲಗಳ ನೇತೃತ್ವದಲ್ಲಿ ಈ ಮುಷ್ಕರ ನಡೆಯುತ್ತಿದೆ. ಕೇಂದ್ರ ಸರಕಾರದ ಮುಷ್ಕರ ಮುರಿಯುವ ನೀತಿಯನ್ನು, ದಬ್ಬಾಳಿಕೆಯನ್ನೂ ಎದುರಿಸಿ ಕೆಲಸಗಾರರು ಹೋರಾಡುತ್ತಿದ್ದಾರೆ. ರಾಷ್ಟ್ರೀಯ ಚಳುವಳಿ ಸಮಿತಿ, ಸಿಐಟಿಯು ಅಧ್ಯಕ್ಷ ಬಿ. ಟಿ. ರಣದಿವೆ, ಪ. ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು ಮುಂತಾದವರೆಲ್ಲ ಸಂಪಿಗೆ ಬೆಂಬಲ ನೀಡಿದ್ದಾರೆ.

ಹತ್ತು ಪೋರ್ಟ್ ಟ್ರಸ್ಟ್‌ಗಳಲ್ಲಿ 1,07,409 ಕಾರ್ಮಿಕರೂ, ಹತ್ತು. ಡಾಕ್ ಲೇಬರ್ ಬೋರ್ಡುಗಳಲ್ಲಿ (ಮುಂಬಯಿ, ಕಲ್ಕತ್ತ, ಮದ್ರಾಸ್, ವಿಶಾಖಪಟ್ಣ, ಕೊಚ್ಚಿನ್, ಮಾರ್ಗೋವಾ, ಕಾಂಡ್ಲಾ) 30, 808 ಕೆಲಸಗಾರರೂ ದುಡಿಯುತ್ತಿದ್ದಾರೆ. ಮಂಗಳೂರು, ಟುಟಿಕೋರಿನ್ ಮತ್ತು ಪಾರದೀಪಗಳಲ್ಲಿ ಡಾಕ್ ಲೇಬರ್ ಬೋರ್ಡುಗಳಿಲ್ಲ. ಇಲ್ಲಿಯ ಕೆಲಸಗಾರರೆಲ್ಲ ಕಂಟ್ರಾಕ್ಟರರನ್ನೇ ಅವಲಂಬಿಸಬೇಕಾಗಿದೆ. ಇವರಲ್ಲದೆ, ನೇರವಾಗಿ ಹಡಗುಗಳ ಏಜಂಟರಿಂದ, ಆಹಾರ ಕಾರ್ಪೋರೇಶನ್ ಮತ್ತು ಇತರ ಏಜನ್ಸಿಗಳ ಮೂಲಕ ನೇಮಿಸಲ್ಪಟ್ಟಿರುವ ಒಂದೂವರೆ ಲಕ್ಷ ಕಾರ್ಮಿಕರೂ ಇದ್ದಾರೆ.

ದೇಶದ ಮುಖ್ಯ ಬಂದರುಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆಲ್ಲ ಒಂದೇ ತರ ವೇತನ ಸಿಗಬೇಕೆಂಬ ಉದ್ದೇಶದಿಂದ 1975 ರಲ್ಲಿ ಕೇಂದ್ರ, ನ್ಯಾಯಾಧೀಶ ಲೋಕೂರರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಿಸಿತ್ತು. ಆ ಕಮಿಟಿಯ ಶಿಫಾರಸಿನಂತೆ ಜುಲೈ 1977 ರಂದು ಕೇಂದ್ರ ಸರಕಾರ ನಾಲ್ಕು ಫೆಡರೇಶನ್‌ಗಳ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿತ್ತು. ರೂ. 1·30 ರಿಂದ ರೂ. 2 ರವರೆಗೆ 3 ತರದ ತುಟ್ಟಿ ಭತ್ತೆಯನ್ನು ಕಮಿಟಿ ಶಿಫಾರಸ್ ಮಾಡಿತ್ತು. ಆದರೆ ಸರಕಾರ ಮಾತ್ರ ರೂ. 1·30 ಕ್ಕೆ ಅಂಟಿಕೊಂಡಿತ್ತು. ಬೆಲೆ ಸೂಚ್ಯಾಂಕ ಹೆಚ್ಚಿದಂತೆ ಮೂಲ ಸಂಬಳಕ್ಕೆ ನಿಚ್ಚಿತ ರೂಪದ ತುಟ್ಟಿ ಭತ್ತೆ ಜೋಡಿಸಲಾಗುತ್ತಿತ್ತು. ಬೆಲೆ ಸೂಚ್ಯಾಂಕ 363 ತಲ್ಪಿದಾಗ ತುಟ್ಟಿ ಭತ್ತೆಯ ಪುನರ್ವಿಚಾರ ಆಗಬೇಕೆಂದು ಸೂಚಿಸಲಾಗಿತ್ತು. ಕೇಂದ್ರ ಸರಕಾರ ಇದಕ್ಕೆ ಮಾನ್ಯತೆ ಕೊಟ್ಟಿಲ್ಲ.

ವಚನ ಪಾಲಿಸಲಿಲ್ಲ

ಅನಂತರ ಹಲವಾರು ಲೇಖಿ ಒಪ್ಪಂದಗಳಾದರೂ ಕೂಡ ಸರಕಾರ ಅವುಗಳನ್ನು ಪಾಲಿಸಲಿಲ್ಲ. 5 ವರ್ಷದ ಒಪ್ಪಂದವನ್ನು ಆರು ವರ್ಷ ಮುಂದುವರಿಸಿತು. ಒಪ್ಪಂದಾಗುವಾಗ ಬಂದರು ಕೆಲಸಗಾರರಿಗೆ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರಿಗಿಂತ ಹೆಚ್ಚು ಸಂಬಳ ಸವಲತ್ತುಗಳು ಸಿಗುತ್ತಿತ್ತು. ಈಗ ಅವರು ಹಿಂದೆ ಬಿದ್ದಿದ್ದಾರೆ. ಹೊಸ ವರ್ಗಿಕರ ಮಂಗಳೂರು, ಟುಟಿಕೋರಿನ್, ಪಾರದೀಪಗಳಲ್ಲಿಯ ಕಂಟ್ರಾಕ್ಟ ಕೆಲಸಗಾರರಿಗೆ ಅಖಿಲ ಭಾರತ ಮಟ್ಟದ ವೇತನ ಶ್ರೇಣಿ ಕೊಡಲಾಗುವುದೆಂಬ ಹಲವಾರು ಒಪ್ಪಂದಗಳನ್ನು ಸರಕಾರ ಜ್ಯಾರಿಯಲ್ಲಿ ತರುತ್ತಿಲ್ಲ, ಇಂಥ ಪರಿಸ್ಥಿತಿಯಲ್ಲಿ ಎಚ್. ಎಂ. ಎಸ್., ಐ. ಎನ್. ಟಿ. ಯು ಸಿ. ಮತ್ತು ಸಿಐಟಿಯುಗೆ ಸೇರಿದ ನಾಲ್ಕು ಒಕ್ಕೂಟಗಳು ಸೇರಿ ಹೊಸ ಬೇಡಿಕೆಗಳ ಸಲುವಾಗಿ ಮುಷ್ಕರ ಹೂಡಬೇಕಾಗಿ ಬಂದಿದೆ.

ಕಳೆದ ನಾಲ್ಕು ತಿಂಗಳಿಂದ ಚರ್ಚೆ ನಡೆಯುತ್ತಿದ್ದರೂ ಕೂಡ ಸರಕಾರ ಶೇ. 10 ಕ್ಕಿಂತ ಹೆಚ್ಚು ವೇತನ ಮತ್ತು ಇತರ ಸೌಕರ್ಯಗಳನ್ನು ಕೊಡಲು ಒಪ್ಪುತ್ತಿಲ್ಲ.

ವಿದೇಶಿ ಕಂಪೆನಿಗಳಿಗೆ ಸಹಾಯ

ಹಡಗು ಕಂಪೆನಿಗಳಿಂದ ವಸೂಲಿ ಮಾಡುತ್ತಿರುವ ಹಣದಿಂದ ಬಂದರು ಕಾರ್ಮಿಕರಿಗೆ ವೇತನ ನೀಡಲಾಗುತ್ತಿದೆ. ಬಂದರುಗಳ ಮೂಲಕ ಹೋಗುವ ಹಡಗುಗಳಲ್ಲಿರುವ ವಸ್ತುಗಳ ಒಟ್ಟು ಮೌಲ್ಯದ ಶೇ. 3 ರಷ್ಟು ಹಣ ಬಂದರ ಅಧಿಕಾರಿಗಳು ವಸೂಲಿ ಮಾಡಬೇಕೆಂದು ಮಜೋರ ಪೋರ್ಟ್ ಕಮಿಶನ್ ಶಿಫಾರಸ್ ಮಾಡಿತ್ತು. ಆದರೆ ನಮ್ಮ ದೇಶದಲ್ಲಿ ಬರೀ ಶೇ. 1 ರಷ್ಟು ಮಾತ್ರ ಹಣ ಸಂಗ್ರಹಿಸಲಾಗುತ್ತಿದೆ. ಇತ್ತೀಚೆಗೆ ಪ್ರಕಟವಾಗಿರುವ ಭಾರತ ರಾಷ್ಟ್ರೀಯ ಹಡಗು ಮಾಲಕರ ಸಂಘದ ಪ್ರಕಟನೆ ನೋಡುವಾಗ ಒಟ್ಟು ವಿದೇಶಿ ಹಡಗು ವ್ಯಾಪಾರದಲ್ಲಿ ಶೇ. 28 ರಷ್ಟು ಮಾತ್ರ ಭಾರತದ ಹಡಗುಗಳು ನೆರವೇರಿಸುತ್ತಿವೆ. ಇದರರ್ಥವೇನೆಂದರೆ ಶೇ. 72 ರಷ್ಟು ಹಡಗು ವ್ಯಾಪಾರವನ್ನು ವಿದೇಶಿ ಕಂಪೆನಿಗಳು ನಡೆಸುತ್ತಿವೆ. ಬಂದರುಗಳಲ್ಲಿ ಕಡಿಮೆ ಹಣ ಸಂಗ್ರಹ ಮಾಡುತ್ತಿರುವುದರಿಂದ ಭಾರತ ಸರಕಾರ ವಿದೇಶಿ ಹಡಗು ಮಾಲಕರಿಗೆ ಸಹಾಯ ಮಾಡುತ್ತಿದೆ; ಅಷ್ಟೇ ಹಣ ವಿದೇಶಿವಿನಿಮಯದಲ್ಲಿ ಹಾನಿಯಾಗುವಂತೆ ಮಾಡುತ್ತಿದೆ ಮತ್ತು ಕಾರ್ಮಿಕ

(8ನೇ ಪುಟ ನೋಡಿ)

ತುಮುಲ ಯುದ್ಧದಲ್ಲಿ ಪರ್ಯವಸಾನಗೊಂಡ ೫೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ರಾಜ್ಯ ಸರಕಾರದ ಬೊಕ್ಕಸದಿಂದ ಲಕ್ಷಾಂತರ ರೂಪಾಯಿ ಧನ ಸಹಾಯ ಪಡೆದು ಅತ್ಯಂತ ವಿಜೃಂಭಣೆಯಿಂದ ಪ್ರತಿ ವರ್ಷ ಸಮಾವೇಶ ನಡೆಸುವ ಪರಿಪಾಠ ಇಟ್ಟುಕೊಂಡಿರುವ ಸಂಸ್ಥೆಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಒಂದಾಗಿದೆ. ಒಂದು ವಾರ್ಷಿಕ ವಿಧಿಯಂತೆ ಇದು ನಡೆಯುತ್ತದೆ. ನಾಡಿನ ಉದ್ದಾಮ ಸಾಹಿತಿಯೊಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಿ ಸಮ್ಮೇಳನದ ದಿವಸ ಅವರ ವಿಜೃಂಭಣೆಯ ಮೆರವಣಿಗೆ, ಅವರ ಹಾಗೆಯೇ ಇತರ ಪ್ರಖ್ಯಾತ ಸಾಹಿತಿಗಳ ಭಾಷಣ ಕವಿಗಳೂ, ಸಾಹಿತಿಗಳೂ, ಸಾಹಿತ್ಯ ಪ್ರೇಮಿಗಳೂ ಒಟ್ಟಿಗೆ ಸೇರಿ ಮೂರು ದಿವಸ ಪರಸ್ಪರ ಮಿಲನ, ವಿಚಾರ ವಿನಿಮಯ ಹಲವಾರು ಗೋಷ್ಠಿಗಳಲ್ಲಿ ಪಾಲ್ಗೊಳ್ಳುವ, ಬೇರೆ ಬೇರೆ ವಿಚಾರಗಳನ್ನು ತಿಳಿದು ಕೊಳ್ಳುವ ಅವಕಾಶ-ಇವುಗಳೆಲ್ಲ ಸಾಹಿತ್ಯ ಸಮ್ಮೇಳನದಲ್ಲಿ ದೊರೆಯಬಹುದಾದ ವೈಶಿಷ್ಟ್ಯಗಳು.

ಈ ಹಿಂದೆ ಕನ್ನಡ ನಾಡಿಗೂ, ಕನ್ನಡ ಭಾಷೆಗೂ ಸಂಬಂಧಪಟ್ಟಂತ ವಿಷಯಗಳ ಕುರಿತು ನಿರ್ಣಯಗಳನ್ನೂ, ಇತ್ತೀಚೆಗೆ ಕನ್ನಡಕ್ಕೆ ಸಂಬಂಧಪಟ್ಟಂಥ ನಿರ್ಣಯಗಳನ್ನು ಕೈಗೊಳ್ಳುವ ಆದರೆ ಅವುಗಳನ್ನು "ಪುಸ್ತಕದ ಬದನೇಕಾಯಿ" ಯನ್ನಾಗಿಯೇ ಇಟ್ಟು, ಕಾರ್ಯಾಚರಣೆ ಮಾಡುವ ವಿಷಯದಲ್ಲಿ ತನ್ನ ನಿರಪೇಕ್ಷಿತ ನಿಷ್ಕ್ರಿಯ ನಿರುತ್ಸಾಹವನ್ನು ತೋರಿಸುವ ಕಾರ್ಯಕ್ರಮವನ್ನೂ ಅಳವಡಿಸಲಾಗುತ್ತಿತ್ತು. ಈ ಸಲ ಭಾಷಣ, ವಿಚಾರಗಳಲ್ಲಿ ತುಮುಲ ಯುದ್ಧವೇ ನಡೆಯಿತು.

ಕೋಲಾರ ಜಿಲ್ಲೆಯ ಒಂದು ಪುಣ್ಯಕ್ಷೇತ್ರವೆಂದು ಹೆಸರುವಾಸಿಯಾದ ಕೈವಾರದಲ್ಲಿ 56 ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸೇರಿತ್ತು.

54 ನೆಯ ಸಮ್ಮೇಳನ ಬೆಳಗಾವಿಯಲ್ಲಿ ಸೇರಿದಾಗ, ಆಗಿನ ಮುಖ್ಯಮಂತ್ರಿ ಗುಂಡೂರಾಯರಿಗೆ ಪುಷ್ಪವೃಷ್ಟಿ ಸುರಿಸಲಾಗಿತ್ತು. 55ನೆಯ ಸಮ್ಮೇಳನ ಧರ್ಮಸ್ಥಳ ಹೆಗಡೆಯವರ ಪೌರೋಹಿತ್ಯದಲ್ಲಿ ಸಮಾವೇಶಗೊಂಡಿತ್ತು. ಸರಕಾರ ಹಾಗೆಯೇ ಕೆಲವೇ ಪಟ್ಟಭದ್ರ ಹಿತಾಸಕ್ತಿಗಳ "ಕೂಸಿ"ನಂತೆ ವರ್ತಿಸುತ್ತಿದ್ದ ಸಾಹಿತ್ಯ ಪರಿಷತ್ತಿನಿಂದ ಬೇಸತ್ತ ಕೆಲವು ಸಾಹಿತಿಗಳು ತಮ್ಮದೇ ಆದ "ಬಂಡಾಯ ಸಾಹಿತ್ಯ" ಪ್ರಾರಂಭಿಸಿ ಪ್ರತ್ಯೇಕ ಸಮಾವೇಶ ನಡೆಸಿ "ಸಾಹಿತ್ಯ ಜನಜೀವನದ, ಅವರ ಹೋರಾಟದ, ಸಮಾಜದ ವಿಚಾರದ ಬದಲಾವಣೆಯ ಪ್ರತಿಬಿಂಬ, ಕೈಕನ್ನಡಿ ಆಗಬೇಕೆಂದು ಕ್ರಾಂತಿಕಾರಿ ವಿಚಾರಗಳಿಗೆ ಅವಕಾಶ ಮಾಡಿಕೊಟ್ಟಾಗ ಬೆಳಗಾವಿ ಧರ್ಮಸ್ಥಳಗಳಲ್ಲಿ ಸೇರಿದ ಸಮ್ಮೇಳನದಲ್ಲಿ "ಬಂಡಾಯ ಸಾಹಿತಿಗಳ ಪ್ರತ್ಯೇಕತೆಯ ಮನೋಭಾವದ ಕುರಿತು ಟೀಕೆಗಳು ಕೇಳಿ ಬಂದಿದ್ದವು. ಕೈವಾರದಲ್ಲಿ

(8ನೇ ಪುಟ ನೋಡಿ)

ಏಪ್ರಿಲ್ 17 ರಂದು ದಿಲ್ಲಿಯಲ್ಲಿ ಸೇರುವ ವಿರೋಧ ಪಕ್ಷಗಳ ರಾಜಕೀಯ ಸಮಾವೇಶವನ್ನು ಯಶಸ್ವಿಗೊಳಿಸಿ

—ಎಸ್ಕೆ

ಕರ್ನಾಟಕ ರಾಜ್ಯದಲ್ಲಿ

ಕಾಂಗ್ರೈ ಒತ್ತಡಕ್ಕೆ ಜನತಾ ಬಲಿ

ರುದ್ರಪ್ಪನವರ ರೈತ ಸಂಘಕ್ಕೂ, ಹಾಗೆ ರಾಜಕುಮಾರರ ಬೆಂಬಲಿಗರಿಗೂ ಹೆಗಡೆ ಸರಕಾರ ಅಂಜಿ ಅನಂತರ ಅನುಭವದಿಂದ ತನ್ನ ತಪ್ಪನ್ನು ತಿದ್ದಿಕೊಳ್ಳುತ್ತಿರುವಾಗಲೇ ಮತ್ತೆ ಕಾಂಗ್ರೈನ ಒತ್ತಡಕ್ಕೆ ಬಲಿಯಾಗುತ್ತಿರುವಂತೆ ಕಂಡು ಬರುತ್ತದೆ, ಜಿಲ್ಲಾ ಪರಿಷತ್ ಮಸೂದೆ ತನ್ನ ಮಂತ್ರಿ ಪದದ ಅಭಿಮಾನದ ಕೊಡುಗೆಯಾಗಿ ತಿಳಿದಿರುವ ಅಬ್ದುಲ್ ನಜೀರ್ ಸಾಹೇಬರೂ ಆ ಮಸೂದೆಯಲ್ಲಿ ಅಡಕವಾಗಿರುವ ನ್ಯಾಯ ಪಂಚಾಯತಿಯನ್ನು ರಚಿಸಬಾರದೆಂದು ಕಾಂಗ್ರೈಯವರು ಶಾಸನ ಸಭೆಯಲ್ಲಿ ಒತ್ತಡ ತಂದಾಗ, ಅದನ್ನು ಜ್ಯಾರಿ ಮಾಡುವುದನ್ನು ಮೂರು ವರ್ಷ ಮುಂದೂಡುವುದಾಗಿ ಸಾರಿರುವುದನ್ನು ನೋಡುವಾಗ ಹೆಗಡೆಯವರಂತೆಯೇ ಇವರೂ ಹಿಂದೇಟು ಹಾಕುತ್ತಿರುವುದು ಕಂಡು ಬರುತ್ತಿದೆ. ಜನತಾ ಸರಕಾರಕ್ಕೆ ದೃಢನಿಲುವು ಅಗತ್ಯ. ಒತ್ತಡಕ್ಕೆ ಬಲಿಯಾಗಿ ತನ್ನ ನಿಲುವಿಗೆ ಹಿಂದೇಟು ಹಾಕುತ್ತಿರುವುದು ನಾಚಿಕೆಗೇಡು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡತ್ವದಲ್ಲಿರುವ ಪ. ಬಂಗಾಲದ ಎಡರಂಗ ಸರಕಾರ ಜ್ಯಾರಿಯಲ್ಲಿ ತಂದಿರುವ ಮಸೂದೆಗೂ, ನಮ್ಮ ರಾಜ್ಯದ ಮಸೂದೆಗೂ ಸ್ವಲ್ಪ ವ್ಯತ್ಯಾಸವಿದ್ದರೂ ಕೂಡ, ಅಧಿಕಾರ ವಿಕೇಂದ್ರಿಕರಣ, ಹಾಗೆಯೇ ಗ್ರಾಮಾಂತರ ಪ್ರದೇಶದಲ್ಲಿ ಇಂದಿಗೂ ಆಳವಾಗಿ ಬೇರೂರಿರುವ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತ ಕಡಿಮೆ ಮಾಡುವ ದೃಷ್ಟಿಯಿಂದ ಈ ಮಸೂದೆ ಸ್ವಾಗತಾರ್ಹ. ಪ.ಬಂಗಾಲದಲ್ಲಿ ಗ್ರಾಮ ಪಂಚಾಯತಿ, ಮಂಡಲ ಪಂಚಾಯತಿ, ಮತ್ತು ಜಿಲ್ಲಾ ಪರಿಷತ್ ಇರುತ್ತದೆ. ಕರ್ನಾಟಕದ ಮಸೂದೆಯಲ್ಲಿ ನ್ಯಾಯ ಪಂಚಾಯತಿ, ಮಂಡಲ ಪಂಚಾಯತಿ ತಾಲ್ಲೂಕ್ ಪರಿಷತ್ ಸಮಿತಿ,ಮತ್ತು ಜಿಲ್ಲಾ ಪರಿಷತ್ ಇದೆ.

ಗ್ರಾಮಾಂತರ ಪ್ರದೇಶದ ಜನರಲ್ಲಿ ಜಾಗೃತಿ, ಪುರೋಗಾಮಿ ವಿಚಾರ, ಸಂಘಟನೆ, ಕೆಳಗಿನ ವರ್ಗದಲ್ಲಿ ಧೈರ್ಯ ಮುಂತಾದವುಗಳೆಲ್ಲ ಕಾಣಿಸಿಕೊಳ್ಳಬೇಕಾದರೆ, ಅಲ್ಲಿ ನೆಲೆಸಿರುವ ಸಾವುಕಾರ ಭೂಮಾಲಕರ ಹಿಡಿತ ನಾಶವಾಗಲೇಬೇಕಾದ್ದು ಅತ್ಯಗತ್ಯ. ಕಾಂಗ್ರೆಸ್ಸಿನ ಬೆನ್ನೆಲುಬು ಈ ವರ್ಗವಾಗಿರುತ್ತದೆ. ಗ್ರಾಮಾಂತರ ಜನರ-ಪ್ರದೇಶದ ಅಭ್ಯುದಯಕ್ಕೆ ಅದು ಅಡ್ಡಿಯನ್ನುಂಟುಮಾಡುತ್ತಿದೆ.

ಈಗಿನ ಮಸೂದೆಯಿಂದ ಇಂಥ ಶಕ್ತಿಗಳನ್ನು ಸ್ವಲ್ಪ ಮಟ್ಟಿಗಾದರೂ ದೂರವಿಡಬಹುದೆಂಬ ವಿಚಾರ ಎಲ್ಲರಲ್ಲಿದೆ.

ಇಂದಿನ ಸಾಮಾಜಿಕ-ರಾಜಕೀಯ ಪರಿಸ್ಥಿತಿಯಲ್ಲಿ ನ್ಯಾಯ ಪಂಚಾಯತಿಯನ್ನು ರಚಿಸಿ, ಸಣ್ಣ ಖಟ್ಲೆಗಳಿಗೆ ಪರಿಹಾರ ಒದಗಿಸಲು ಸಾಧ್ಯವೇ ಅಥವಾ ನ್ಯಾಯ ಪಂಚಾಯತಿಗಳು ಈಗಿರುವ ಪರಿಸ್ಥಿತಿಯನ್ನು ಇನ್ನೂ ಉಲ್ಬಣಗೊಳಿಸಬಹುದೇ ಎಂಬ ಪ್ರಶ್ನೆ ಎಲ್ಲರ ಮುಂದಿದೆ.

ಅಶೋಕ ಮೆಹತಾ ಕಮಿಟಿಯ ವರದಿ ಮೇಲೆ ತಮ್ಮ ಅಭಿಪ್ರಾಯ ವ್ಯಕ್ತ ಮಾಡುತ್ತ ಸಿ.ಪಿ.ಐ. (ಎಂ) ಪ್ರಧಾನ ಕಾರ್ಯದರ್ಶಿ ನಂಬೂದಿರಿಪಾಡ್ ಅವರು ಜಿಲ್ಲಾ ಪರಿಷತ್ತಿನ ಮಸೂದೆಗಳಲ್ಲಿ ನ್ಯಾಯ ಪಂಚಾಯತಿ ಸಮಿತಿಗಳನ್ನು ಸೇರಿಸಬಾರದೆಂದೂ, ನ್ಯಾಯಾಂಗ ಪದ್ಧತಿಯ ಸುಧಾರಣೆ ಪ್ರಶ್ನೆ ಬಂದಾಗ, ಗ್ರಾಮಾಂತರ ಪ್ರದೇಶಗಳಲ್ಲಿ ನ್ಯಾಯ ಪಂಚಾಯತಿಗಳನ್ನು ರಚಿಸುವುದನ್ನು ಯೋಚಿಸುವುದು ಯೋಗ್ಯವೆಂದು ಹೇಳಿದ್ದಾರೆ. ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿ ಕೂಡ ಅದೇ ಅಭಿಪ್ರಾಯ ವ್ಯಕ್ತ ಮಾಡಿದೆ. ಸೆಲೆಕ್ಟ್ ಕಮಿಟಿಯ ಸದಸ್ಯರಾಗಿದ್ದ ಸಿ.ಪಿ.ಐ. (ಎಂ) ಶಾಸಕರಾದ ಸೂರ್ಯನಾರಾಯಣ ರಾವ್ ಕೂಡ ತನ್ನ ಭಿನ್ನಾಭಿಪ್ರಾಯದಲ್ಲಿ ನ್ಯಾಯ ಪಂಚಾಯತಿಯನ್ನು ಮಸೂದೆಯಿಂದ ತೆಗೆದು ಹಾಕಬೇಕೆಂಬ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಗುಜರಾತಿನಲ್ಲಿ ನ್ಯಾಯ ಪಂಚಾಯತಿಯ ಕಾರ್ಯ ಯಶಸ್ವಿಯಾಗಿಲ್ಲ. ಕಾರಣ ಅದನ್ನು ರದ್ದು ಪಡಿಸಲಾಗಿದೆಯೆಂದು ತಿಳಿದು ಬರುತ್ತದೆ. ಪಶ್ಚಿಮ ಬಂಗಾಲದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಪಂಚಾಯತಿಗಳೆಲ್ಲ ಸಿ.ಪಿ.ಐ. (ಎಂ) ಮತ್ತು ಅದರ ಬೆಂಬಲಿಗರ ವಶದಲ್ಲಿದ್ದರೂ ಕೂಡ ಅಲ್ಲಿಯೂ ನ್ಯಾಯ ಪಂಚಾಯತಿಯನ್ನು ಅನುಷ್ಠಾನದಲ್ಲಿ ತಂದಿರುವುದಿಲ್ಲ.

ಇಲ್ಲಿ ನ್ಯಾಯ ಪಂಚಾಯತಿಯನ್ನು ರಚಿಸಿಯೇ ತೀರುತ್ತೇನೆಂದು ಹೇಳಿದ ಅಬ್ದುಲ್ ನಜೀರ ಸಾಬರು ಧೈರ್ಯದಿಂದ ಅದನ್ನು ಜ್ಯಾರಿಯಲ್ಲಿ ತಂದೇ ತೀರುತ್ತೇನೆಂದೂ, ಮುಂದೆ ಅದು ಸರಿಯಾಗಿ ಕೆಲಸ ಮಾಡದಿದ್ದರೆ ಪುನರ್ವಿಚಾರ ಮಾಡುತ್ತೇನೆಂದೂ ದೃಢ ನಿಲುವು ತಾಳದೆ, ಕಾಂಗ್ರೆಸ್ಸಿನವರು ವಿರೋಧಿಸಿದ ಕೂಡಲೇ ಅದನ್ನು ಜ್ಯಾರಿಯಲ್ಲಿ ತರಲು ಮೂರು ವರ್ಷ ಮುಂದೂಡಿರುವುದು ಜನತಾ ಮಂತ್ರಿಗಳಲ್ಲಿರುವ ಅನಿರ್ದಿಷ್ಟತೆಯ ಪ್ರದರ್ಶನವಾಗಿದೆ.

ಮಸೂದೆಯಲ್ಲಿ ಅಳವಡಿಸಿರುವುದರಿಂದ ನಮ್ಮ ರಾಜ್ಯದಲ್ಲಿ ಅದನ್ನು ಅನುಷ್ಠಾನದಲ್ಲಿ ತಂದು, ಅದರ ಅನುಭವ ಪಡೆದು, ಅನ್ಯಾಯಕಾರಿ ಯಾದರೆ ಅದನ್ನು ರದ್ದು ಪಡಿಸಿದ್ದರೆ ತಪ್ಪೇನಾಗುತ್ತಿರಲಿಲ್ಲ.

ಹೆಗಡೆಯವರ ಬದಲಾದ ವಿಚಾರ

ಹೆಗಡೆಯವರು ಹೋದ ವರ್ಷ ಅಧಿಕಾರ ಸ್ವೀಕಾರ ಮಾಡಿದಾಗ, ರುದ್ರಪ್ಪನವರ ರೈತ ಸಂಘ ಒಂದೇ ನಿಜವಾದ ರೈತರ ಪ್ರತಿನಿಧಿ ಎಂದು ನಂಬಿದ್ದರು. ಅದರ ಜೊತೆಯಲ್ಲಿಯೇ ಮಾತುಕತೆ ನಡೆಸಿದ್ದರು. ಹೆಗಡೆಯವರ ಆ ನೀತಿಯನ್ನು ಆಗಲೇ ನಾವು ಖಂಡಿಸಿದ್ದೆವು. ಬೇರೆ ರೈತ ಸಂಘಗಳ ಜೊತೆಯಲ್ಲಿ ವ್ಯವಹರಿಸಲು ಆಗ ಹೆಗಡೆಯವರು ತಯಾರಿರಲಿಲ್ಲ.

ಹೆಗಡೆ ಸರಕಾರ ಹೋಗಬೇಕೆಂದು ಚಳುವಳಿ ಹೂಡಿದರೂ ಅದು ಸಾಧ್ಯವಾಗಲಾರದಾದಾಗ, ಶಾಸಕರಿಗೆ ಘೇರಾವೋ ಮಾಡಿ, ಅವರೆಲ್ಲ ಸ್ವತಂತ್ರ ಶಾಸಕರಾಗಿ ಉಳಿಯುವಂತೆ ಮಾಡಿ ಜನತಾ ಸರಕಾರ ಉರುಳಿಸುವ ಕುತಂತ್ರವನ್ನು ಅವರು ಅನುಸರಿಸಿದಾಗ ಮಾತ್ರ ಹೆಗಡೆಯವರು ಧೈರ್ಯದ ನಿಲುವು ತಾಳಿರುವುದು ಸ್ವಾಗತಾರ್ಹ. ಏಪ್ರಿಲ್ 4 ರಂದು ರಾಜ್ಯದ 4 ರೈತ ಸಂಘದ ಪ್ರತಿನಿಧಿಗಳನ್ನು ಚರ್ಚೆಗೆ ಆಹ್ವಾನಿಸಲಾಗಿದೆ. ರುದ್ರಪ್ಪನವರ ರೈತ ಸಂಘ ಇತರ ರೈತ ಪ್ರತಿನಿಧಿಗಳ ಜೊತೆಯಲ್ಲಿ ಚರ್ಚಿಸಲು ನಿರಾಕರಿಸಿದ್ದಾರೆ. ಅವರ ಬೆದರಿಕೆಗೆ ಹೆಗಡೆ ಮಣಿಯದಿರುವುದು ಶುಭ ಚಿಹ್ನೆ.

3ನೇ, 4ನೇ ದರ್ಜೆ ನೌಕರರನ್ನು ನೇಮಿಸುವಾಗ ಕನ್ನಡ ಕಲಿಯಲು ಅವರಿಗೆ 2 ವರ್ಷ ಕಾಲಾವಕಾಶ ಒದಗಿಸಬೇಕೆಂದು ಸರಕಾರ ನಿರ್ಧರಿಸಿದಾಗ, ರಾಜಕುಮಾರ್ ಬೆಂಬಲಿಗರು ಅದರ ವಿರುದ್ಧ ಚಳುವಳಿ ಪ್ರಾರಂಭಿಸಿದಾಗ, ತನ್ನ ಸರಕಾರದ ನಿಲುವನ್ನು ಪುನರ್ವಿಮರ್ಶಿಸಲು ರಾಜಕುಮಾರ್‌ರವರ ಅಧ್ಯಕ್ಷತೆಯಲ್ಲೇ ಒಂದು ಕಮಿಟಿ ನೇಮಿಸಿ ತನ್ನ ಚಂಚಲತೆಯನ್ನು ತೋರಿಸಿದರು ಹೆಗಡೆಯವರು. ತನ್ನ ನಿರ್ಣಯವನ್ನು ರಾಜಕುಮಾರ್ ನಿರಾಕರಿಸಿದಾಗ, ಅವರ ನಿಲುವೆಯನ್ನು ವಿರೋಧಿಸಲಿಕ್ಕೆ ಬೇಕಾದ ಜನಾಭಿಪ್ರಾಯ ಉಂಟು ಮಾಡುವಲ್ಲಿ ಜನತಾ ಸರಕಾರ, ಜನತಾ ಪಕ್ಷ ಹಾಗೆಯೇ ಎಡ ಪ್ರಜಾಪ್ರಭುತ್ವ ಶಕ್ತಿಗಳು ವಿಫಲಗೊಂಡವು. ರಾಜಕುಮಾರ್ ಬೆಂಬಲಿಗರ ಸಂಕುಚಿತ ಕನ್ನಡಾಭಿಮಾನಿ ಚಳುವಳಿಗೆ ಮೂವರು ಅಲ್ಪ ಮತಸ್ಥರು ಬಲಿಯಾಗಿರುವುದು ಮಾತ್ರವಲ್ಲದೆ, ಆಸ್ತಿಪಾಸ್ತಿಗೂ ಸಾಕಷ್ಟು ಹಾನಿ ಉಂಟಾಗಿದೆ. ಊಟಿಯಲ್ಲಿ ರಾಜಕುಮಾರ್ ಅವರ ಮೇಲೆ ಹಲ್ಲೆ ನಡೆದ ನಂತರವೂ ಅವರ ಬೆಂಬಲಿಗರು ಬೆಂಗಳೂರಿನಲ್ಲಿ ಹಿಂಸಾಚಾರಕ್ಕಿಳಿದರು. ರಾಜಕುಮಾರ್‌ರವರ ಆರೋಗ್ಯ ವಿಚಾರಿಸಲು ಹೆಗಡೆಯವರು ಅವರ ಮನೆಗೆ ಹೋದಾಗ ರಾಜಕುಮಾರ್‌ರವರ ಪತ್ನಿ ಪಾರ್ವತಮ್ಮ ಕೆಟ್ಟಬೈಗಳಿಂದ ಮುಖ್ಯ ಮಂತ್ರಿಯವರನ್ನು ಸ್ವಾಗತಿಸಿದರು.

ಜನತಾ ಸರಕಾರ ಉರುಳಿಸುವ ಕಾಂಗ್ರೈ ಕುತಂತ್ರಕ್ಕೆ ಇಂಥ ಶಕ್ತಿಗಳೆಲ್ಲ ಪ್ರತ್ಯಕ್ಷ ಅಪ್ರತ್ಯಕ್ಷ ರೀತಿಯಿಂದ ಬೆಂಬಲ ನೀಡುತ್ತಿರುವಾಗ, ರೈತರ ,ಭಾಷೆಯ ವಿಷಯಗಳಲ್ಲಿ ಹೆಗಡೆಯವರು ಚಂಚಲತೆ ಬಿಟ್ಟು ಕೊಟ್ಟು ದೃಢ ನಿಲುವು ತಾಳುವುದು ಅತ್ಯಗತ್ಯ. ಅದರಂತೆಯೇ ಜನ ಜಾಗೃತಿ ಕ್ರಮ ಕೈಗೊಳ್ಳುವುದೂ ಅಷ್ಟೇ ಅವಶ್ಯವೆಂಬುದನ್ನು ಒತ್ತಿ ಹೇಳಲಿಚ್ಛಿಸುತ್ತೇವೆ.

ಭ್ರಷ್ಟಾಚಾರದ ತಾಂಡವ ನೃತ್ಯ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭ್ರಷ್ಟಾಚಾರದಿಂದ ತುಂಬಿ ತುಳುಕಾಡುತ್ತಿತ್ತೆಂದೂ, ಹೆಗಡೆ ಸರಕಾರ ಅಧಿಕಾರಕ್ಕೆ ಬಂದ ನಂತರ ಕೂಡ ಅದರ ಆಡಳಿತೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲೆಂಬ ಆರೋಪವನ್ನು ಹೋದ ವರ್ಷ ಐಕ್ಯರಂಗ ಪ್ರಕಟಿಸಿತ್ತು. ಮನೆಗಳನ್ನು ಕಟ್ಟುವ ಯೋಜನೆಗನುಸಾರ ಯಾವ ಟೆಂಡರನ್ನೂ ಕರೆಯದೇ ರಶ್ಮಿ ಕಂಟ್ರ್ಯಾಕ್ಟರ್ ಮತ್ತು ಜೋಡಿ ಇಂಜನಿಯರಿಂಗ್ ಅವರಿಗೆ ಒಪ್ಪಿಸಿರುವುದು ಸರಿಯಲ್ಲೆಂದೂ, ಅದರಲ್ಲಿ ಭ್ರಷ್ಟಾಚಾರ ಅಡಗಿದೆಯೆಂದೂ ನಾವು ಹೋದ ವರ್ಷ ಎಚ್ಚರಿಸಿದ್ದೆವು. ಕರ್ನಾಟಕ ಶಾಸನ ಸಭೆಯ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ತನ್ನ ವರದಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಡಳಿತೆಯನ್ನು ಕಟುವಾಗಿ ಟೀಕಿಸಿದೆ.

ಮೇಲಿನ ಎರಡು ಕಂಪೆನಿಗಳಿಗೆ ಮನೆ ಕಟ್ಟುವ ಕಂಟ್ರ್ಯಾಕ್ಟ್ ಕೊಟ್ಟಿರುವುದಷ್ಟೇ ಅಲ್ಲ, ಸಿಕ್ಕಿಂ ರಾಜ್ಯದ ಟ್ರೇಡಿಂಗ್ ಕಾರ್ಪೊರೇಶನ್‌ನಿಂದ ಸರಕಾರದ ಮಂಜೂರಾತಿ ಇಲ್ಲದೆ 10 ಸಾವಿರ ಟನ್ ಸಿಮೆಂಟ್ ತರಿಸಿ, ರಾಜ್ಯದ ಖಜಾನೆಗೆ ಒಂದು ಕೋಟಿ ರೂಪಾಯಿ ನಷ್ಟ ಉಂಟು ಮಾಡಿರುವುದನ್ನೂ ಉಲ್ಲೇಖಿಸಿ, ಇಷ್ಟು ನಷ್ಟ ಮಾಡಿಕೊಂಡು ಸಿಮೆಂಟ್ ತರಿಸಿದರೂ ಕೂಡ ಅದರ ಪೈಕಿ ಶೇ 60 ಕ್ಕಿಂತಲೂ ಹೆಚ್ಚಿನ ಸಿಮೆಂಟನ್ನು ಆರು ತಿಂಗಳಾದರೂ ಕೂಡ ಉಪಯೋಗ ಮಾಡದೆ ಹಾಳುಕೆಡವಿರುವುದು ಅತ್ಯಂತ ಹೇಯ ಕೃತ್ಯವೆಂದು ಆರೋಪಿಸಿದೆ.

ಲೋಕ ಆಯುಕ್ತ ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸುತ್ತ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಭ್ರಷ್ಟಾಚಾರವನ್ನು ತಡೆಗಟ್ಟಲು ಜನತೆ ಸಹಕರಿಸಬೇಕೆಂದು ಕೇಳಿಕೊಂಡಿದ್ದಾರೆ. ರಾಜಕೀಯ ಭ್ರಷ್ಟಾಚಾರ ತನ್ನ ಆಡಳಿತೆಯಲ್ಲಿ ಸಂಪೂರ್ಣ ತಡೆ ಹಿಡಿಯಲ್ಪಟ್ಟಿದೆಂದೂ ಘೋಷಿಸಿದ್ದಾರೆ. ಜನತಾ ಪಕ್ಷದ ವರ್ಗ ಗುಣವನ್ನರಿತ ನಾವು ಹೆಗಡೆಯವರ ಹೇಳಿಕೆಯನ್ನು ನಂಬುವುದಿಲ್ಲ. ಭ್ರಷ್ಟಾಚಾರ ಕಡಿಮೆಯಾಗಿಲ್ಲ. ಮುಂಚಿನಂತೆಯೇ ಮುಂದುವರಿದಿದೆಂದು ಪ್ರತಿಯೊಬ್ಬರೂ ಮಾತಾಡುತ್ತಿದ್ದಾರೆ. ಲಂಚವಿಲ್ಲದೆ ಒಂದು ಕಾಗದ ಕೂಡ ಟೇಬಲ್ಲಿನಿಂದ ಮತ್ತೊಂದು ಟೇಬಲಿಗೆ ಹೋಗುವುದಿಲ್ಲೆಂದು ನಾವು ಹೇಳಲು ಹೆದರುವುದಿಲ್ಲ. ಬಂಡವಾಳಶಾಹಿ ಸಮಾಜದಲ್ಲಿ ಭ್ರಷ್ಟಾಚಾರ ಪೂರ್ಣ ನಿಲ್ಲಿಸುವುದು ಅಶಕ್ಯವಾದರೂ ಕೂಡ, ಜನತೆಯ ತೀವ್ರ ಚಳುವಳಿಯಿಂದ ಅದನ್ನು ಕಡಿಮೆ ಮಾಡಲು ಸಾಧ್ಯ. ಜನತೆ ಎಚ್ಚರಿಕೆಯಿಂದ ವರ್ತಿಸುತ್ತಿರುವಾಗಲೇ, ಹೆಗಡೆ ಸರಕಾರ ತನ್ನ ಸರಕಾರದಲ್ಲಿರುವ ಈ ಕಳಂಕವನ್ನು ದೂರ ಮಾಡಲು ಪ್ರಯತ್ನಿಸುವುದು ಅತ್ಯಗತ್ಯ.

ಎಸ್. ಎಫ್. ಐ. ರಾಜ್ಯ ಸಮಿತಿ ಸಭೆ

ಎಸ್.ಎಫ್.ಐ. ಯ ಕರ್ನಾಟಕ ರಾಜ್ಯ ಸಮಿತಿಯ ಸಭೆ ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಮಾರ್ಚ್ 15, 16 ರಂದು ಆರ್. ಜಯಕುಮಾರ್ ಅವರ ಅಧ್ಯಕ್ಷತೆಯಲ್ಲಿ ಸೇರಿ ಸಂಘಟನೆಯ ಹಾಗೂ ಕಾರ್ಯಕ್ರಮಗಳ ಕುರಿತು ಚರ್ಚೆ ಮಾಡಿತು.

ಹೊರಗಿನಿಂದಲೇ ಪರೀಕ್ಷೆಗೆ ಕೂಡುವ ಡಿಪ್ಲೋಮ ವಿದ್ಯಾರ್ಥಿಗಳಿಗೆ ಸ್ಥಳೀಯವಾಗಿಯೇ ಪರೀಕ್ಷೆಗಳನ್ನು ನಡೆಸಲು ಮತ್ತು ಕಾರ್ಖಾನೆಯ ಅನುಭವವಿರುವವರಿಗೆ ಶೇ 45 ಕ್ಕಿಂತ ಕಡಿಮೆ ಇದ್ದರೂ ಪ್ರವೇಶ ಪರೀಕ್ಷೆ ಮೂಲಕ ಅವಕಾಶ ಕಲ್ಪಿಸಿಕೊಡಬೇಕೆಂದು ತಾಂತ್ರಿಕ ಶಿಕ್ಷಣ ಇಲಾಖೆ ಮತ್ತು ರಾಜ್ಯ ಸರಕಾರವನ್ನು ಒತ್ತಾಯಿಸುವ, ರಾಜ್ಯದ ವಾಣಿಜ್ಯ ವಿದ್ಯಾ ಸಂಸ್ಥೆಗಳಲ್ಲಿ ಇತ್ತೀಚೆಗೆ ಟೈಪ್ ರೈಟಿಂಗ್ ಮಾಸಿಕ ಶುಲ್ಕವನ್ನು ಶೇ 50 ರಷ್ಟು ಹೆಚ್ಚಿಸಿರುವುದನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಅವರು ಸಮ್ಮೇಳನದಿಂದೀಚೆಗಿನ ವರದಿ ಸಲ್ಲಿಸಿದರು.

ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಬೆಂಗಳೂರಿನಲ್ಲಿ ರಾಜ್ಯಮಟ್ಟದ ವಿದ್ಯಾರ್ಥಿನಿಯರ ಸಮಾವೇಶ ನಡೆಸಬೇಕೆಂದೂ, ಮೇ ತಿಂಗಳ ಕೊನೆಯ ವಾರದಲ್ಲಿ 4 ದಿನಗಳ ಬೇಸಿಗೆ ಶಿಬಿರ ನಡೆಸಬೇಕೆಂದೂ ನಿರ್ಣಯಿಸಲಾಯಿತು.

ಸಾಮೂಹಿಕ ಚಳುವಳಿ ಮುಂದುವರಿಯಲಿ

—ಕಿಸಾನ್ ಸಭೆಯ ಕರೆ

ಭೀಕರವಾಗುತ್ತಿರುವ ಬಿಕ್ಕಟ್ಟಿನ ಹೊರೆಯನ್ನು ರೈತರ ಮೇಲೆ ಹೇರಿ, ಈಗಾಗಲೇ ಗಂಭೀರವಾಗಿರುವ ಒಕ್ಕಲತನದ ಪರಿಸ್ಥಿತಿಯನ್ನು ಮತ್ತಷ್ಟು ವಿಕೋಪಕ್ಕೊಯ್ಯಲು ಕಾಂಗ್ರೆಸ್ ಸರಕಾರ ನಿರ್ಧರಿಸಿದೆ.

ರೈತಾಪಿ ಜನರಿಗೆ ಪರಿಹಾರ ಒದಗಿಸದೆ, ರೈತ ಉಪಯೋಗಿಸುವ ವಸ್ತುಗಳ ಬೆಲೆಯನ್ನೂ, ಕರಭಾರವನ್ನೂ ಹೆಚ್ಚಿಸಲಾಗಿದೆ. ಬಸ್, ರೇಲ್ವೆ, ವಿದ್ಯುಚ್ಛಕ್ತಿ, ನೀರಾವರಿ ದರಗಳಲ್ಲಿ ಹೆಚ್ಚಳವಾಗಿದೆ. ಎಕ್ಸೈಸ್ ಕರವೂ ಜಾಸ್ತಿಯಾಗುತ್ತಿದೆ. ಬಳಕೆಯ ವಸ್ತುಗಳ ಬೆಲೆ ಹೆಚ್ಚುತ್ತಲೇ ಇರುವಾಗ, ಒಕ್ಕಲತನ ಹುಟ್ಟುವಳಿಗಳ ಉತ್ಪಾದನೆಯ ಖರ್ಚು ಏರುತ್ತಿರುವಾಗ, ಕಬ್ಬು, ತಂಬಾಕು, ನಾರು, ಹತ್ತಿ ಮುಂತಾದ ಬೆಳೆಗಳಿಗೆ ನ್ಯಾಯ ಬೆಲೆ ನಿರಾಕರಿಸಲಾಗುತ್ತಿದೆ. ಗೋದಿಯ ಬೆಂಬಲಿತ ಬೆಲೆಯಲ್ಲಿ ಬರೇ ರೂ. ಒಂದು ಹೆಚ್ಚಿಸಿರುವುದು ಹಾಸ್ಯಾಸ್ಪದ.

ಪ್ರಾಕೃತಿಕ ಅವಘಡಗಳಿಂದಲೂ ಹುಳ ಹುಪ್ಪಟೆಗಳಿಂದಲೂ ರೈತರಿಗೆ ಹೆಚ್ಚಿನ ತೊಂದರೆಯಾಗಿದೆ. ನೆರೆಹಾವಳಿ, ಬರಗಾಲ, ಬಿರುಗಾಳಿ ಮೊದಲಾದವುಗಳಿಂದಾಗುವ ಹಾನಿಗೆ ಸರಿಯಾದ ಪರಿಹಾರ ಸಿಗದೆ ಬೆಳೆಯ ಜೀವವಿಮೆ ಇಲ್ಲದೆ ಇರುವುದರಿಂದ ಅವರೆಲ್ಲ ಪ್ರಕೃತಿಯಿಂದಾಗುವ ಹಾನಿಗೆ ನಿರುಪಾಯದವರಾಗಬೇಕಾಗಿದೆ. ಬಹುಸಂಖ್ಯ ಒಕ್ಕಲಿಗರೆಲ್ಲ ಅತಿಯಾದ ಸಾಲಕ್ಕೆ ತುತ್ತಾಗಿದ್ದಾರೆ. ಬಡವರ್ಗದ ರೈತರಿಗೆ ಸಾಲ ಒದಗಿಸುವ ಸರಕಾರದ ಕಾರ್ಯಕ್ರಮ ಇವರ ಅವಶ್ಯಕತೆಗಳ ನೆರಗನ್ನು ಕೂಡ ಕಂಡಿಲ್ಲೆಂದೇ ಹೇಳಿದರೆ ತಪ್ಪಾಗಲಾರದು.

ಪರಿಣಾಮಕಾರಿ ಭೂ ಸುಧಾರಣಾ ಕಾರ್ಯಕ್ರಮ ವಿಲ್ಲದಿರುವುದರಿಂದಾಗಿ ನಿರುದ್ಯೋಗತನ ಮತ್ತು ಬಡತನ ತಾಂಡವವಾಡುತ್ತಿದೆ. ಪ್ರಗತಿ ಪರವಾದ ಭೂ ಮಸೂದೆಯನ್ನು ಜಾರಿಯಲ್ಲಿ ತರುವುದರಲ್ಲಿ ಸರಕಾರ ವಿಫಲಗೊಂಡಿರುವುದು ಮಾತ್ರವಲ್ಲ ಹಲವಾರು ದಶಕಗಳಿಂದ ಪಾಲಿಗೆ ಕೃಷಿ ಮಾಡುವ ಲಕ್ಷಾವಧಿ ಕೃಷಿಕರನ್ನು ಅವರ ಭೂಮಿಯಿಂದ ಹೊರ ಹಾಕಲಾಗಿದೆ. ಅಂಥವರಿಗೆ ಭೂಮಿಯ ಹಕ್ಕು ಪತ್ರವನ್ನು ಕೂಡ ಒದಗಿಸಿರುವುದಿಲ್ಲ. ಕನಿಷ್ಠ ಹಿಡುವಳಿಯ ಕಾನೂನಿನಲ್ಲಿರುವ ತಪ್ಪುಗಳನ್ನು ಸಂಪಡಿಸಿರುವ ಪಶ್ಚಿಮ ಬಂಗಾಲ ಭೂ. ಸುಧಾರಣೆಯ ತಿದ್ದುಪಡಿ ಮಸೂದೆ ಶಾಸನ ಸಭೆಯಲ್ಲಿ ಪಾಸಾಗಿ ರಾಷ್ಟ್ರಾಧ್ಯಕ್ಷರ ಮಂಜೂರಿಗಾಗಿ ಕಳುಹಿಸಲ್ಪಟ್ಟು ಎರಡೂವರೆ ವರ್ಷಗಳಾದರೂ ಕೂಡ, ರಾಷ್ಟ್ರಾಧ್ಯಕ್ಷರು ಅದಕ್ಕೆ ಸಹಿ ಮಾಡಿರುವುದಿಲ್ಲ. ಈ ಕಾರಣದಿಂದಾಗಿ ಭೂಹೀನರಿಗೂ, ಬಡ ರೈತರಿಗೂ ಪರಿಹಾರ ಒದಗಿಸಲು ಸಾಧ್ಯವಾಗುತ್ತಿಲ್ಲ.

ಭೂಮಿ ಮತ್ತು ಕೂಲಿಗೆ ಸಂಬಂಧಪಟ್ಟಂತೆ, ಹರಿಜನ-ಗಿರಿಜನರ ಮೇಲೆ ಭೂ ಮಾಲಕರ, ಅವರ ಗೂಂಡಾಗಳ ಅತ್ಯಾಚಾರ ದಿನನಿತ್ಯ ಹೆಚ್ಚಾಗುತ್ತಿದೆ. ಪೋಲೀಸರು ಇದಕ್ಕೆಲ್ಲ ಬೆಂಬಲ ಕೊಡುತ್ತಿದ್ದಾರೆ.

ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ನಿರ್ಧರಿಸಿ, ಅವರ ಜೀವನ ಸುಧಾರಿಸಲು ಕೇಂದ್ರ ಸರಕಾರ ನಿರಾಕರಿಸುತ್ತಿದೆ.

ಈ ಎಲ್ಲ ಕಾರಣಗಳಿಂದಾಗಿ ರೈತ ಜನಾಂಗದಲ್ಲಿ ಅಸಮಾಧಾನ ಹೆಚ್ಚಾಗುತ್ತಿದ್ದು. ಜಾತೀವಾದಿಗಳೂ, ಛಿದ್ರಕಾರಿ ಶಕ್ತಿಗಳೂ ಇವರ ಗಮನವನ್ನು ವಿಚ್ಛಿದ್ರಕಾರಿ ಕೃತಿಗಳತ್ತ ಸೆಳೆಯುತ್ತಿದ್ದಾರೆ. ಇದು ಸಂಘಟಿತ ರೈತ ಚಳುವಳಿಗೆ ಆಹ್ವಾನವಾಗಿ ಬೆಳೆದುಬರುತ್ತಿದೆ. ಗುನ್ಹೆಗಳೂ, ಮಹಿಳೆಯರ ಮೇಲೆ ಅತ್ಯಾಚಾರವೂ ಹೆಚ್ಚಾಗುತ್ತಿದೆ.

ರೈತರಿಗೆ ಪರಿಹಾರ ಒದಗಿಸುವಂಥ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರಕಾರಗಳಿಗೆ ಅಧಿಕಾರ ಕೊಡುವುದರಲ್ಲಿಯೂ ಕೇಂದ್ರ ಸರಕಾರ ಅಡ್ಡಿಯನ್ನುಂಟು ಮಾಡುತ್ತಿದೆ. ಕೇಂದ್ರ ಸರಕಾರದ, ಭೂ ಮಾಲಕರ ಹಾಗೆಯೇ ವಿಚ್ಛಿದ್ರಕಾರಿ ಶಕ್ತಿಗಳ ದಬ್ಬಾಳಿಕೆಯನ್ನು ಧೈರ್ಯದಿಂದ ಎದುರಿಸಲೇಬೇಕು. ಹಾಗೆ ಮಾಡುತ್ತಿರುವಾಗಲೇ ಕೆಳಗಿನ ಬೇಡಿಕೆಗಳಿಗಾಗಿ ಹೋರಾಡಬೇಕು.

1. ಆಹಾರಧಾನ್ಯ, ಬೇಳೆಕಾಳು, ಎಣ್ಣೆ, ಉಪ್ಪು, ಸಕ್ಕರೆ, ಅಡಿಗೆಯ ಇದ್ದಲು, ಚಿಮಿಣಿ ಎಣ್ಣೆ, ಬಟ್ಟೆಗಳು, ಕಾಗದ, ಜೀವ ಉಳಿಸುವ ಮದ್ದು ಮುಂತಾದವುಗಳನ್ನು ಕೇಂದ್ರ ಸರಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಗ್ರಾಮಾಂತರ ಮತ್ತು ನಗರ ಪ್ರದೇಶದಲ್ಲಿ ವ್ಯವಸ್ಥಿತವಾಗಿ ವಿತರಣೆ ಮಾಡಬೇಕು.

2. ಒಕ್ಕಲತನ ಹುಟ್ಟುವಳಿಗೆ ನ್ಯಾಯಬೆಲೆ ನಿರ್ಧರಿಸಬೇಕು. ರೈತರು ತಾವು ಬೆಳೆದ ಬೆಳೆಯನ್ನು ಅಗ್ಗ ದರದಲ್ಲಿ ಮಾರಾಟ ಮಾಡಬೇಕಾದಂಥ ಪರಿಸ್ಥಿತಿಯಿಂದ ತಪ್ಪಿಸಲು, ರಾಶಿ ನಡೆಯುತ್ತಿರುವಾಗಲೇ ಸರಕಾರದವರು ಸಾಕಷ್ಟು ಧಾನ್ಯ ಖರೀದಿಸಬೇಕು.

3. ಎಕ್ಸೈಸ್ ಡ್ಯೂಟಿಯನ್ನು ಕಡಿಮೆ ಮಾಡಿ, ಒಕ್ಕಲತನಕ್ಕೆ ಬೇಕಾದ ವಸ್ತುಗಳ ಬೆಲೆ ಇಳಿಯುವಂತೆ ಮಾಡಬೇಕು. ಕೆಳವರ್ಗದ ರೈತರಿಗೆ ಪರಿಹಾರ ಒದಗಿಸುವ ದೃಷ್ಟಿಯಿಂದ ವಿದ್ಯುಚ್ಛಕ್ತಿ ನೀರಾವರಿ ದರಗಳನ್ನು ಕಡಿಮೆ ಮಾಡಬೇಕು.

4. ಈಗಿರುವ ಭೂ ಸುಧಾರಣೆ ಕಾಯ್ದೆಗಳಲ್ಲಿರುವ ಕುಂದು ಕೊರತೆಗಳನ್ನು ನಿವಾರಿಸಿ, ಪರಿಣಾಮಕಾರಿಯಾಗಿ ತ್ವರಿತಗತಿಯಲ್ಲಿ ಆ ಮಸೂದೆಗಳನ್ನೆಲ್ಲ ಜಾರಿಯಲ್ಲಿಳಿಸಬೇಕು.

ಒಕ್ಕಲತನ ಮಾಡುವವರನ್ನು ಭೂಮಿಯಿಂದ ಒಕ್ಕಲೆಬ್ಬಿಸುವುದನ್ನು ಪ್ರತಿಬಂಧಿಸಿ, ಎಲ್ಲ ತರದ ಒಕ್ಕಲುಗಳು ಹಾಗೂ ಪಾಲಿಗೆ ಭೂಮಿ ಮಾಡುವವರಿಗೆ ಒಂದು ವರ್ಷದೊಳಗೆ ಭೂಮಿ ಹಕ್ಕು ಪತ್ರಕೊಡಬೇಕು.

5. ಬಡರೈತರಿಗೆ ಹೆಚ್ಚಿನ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಕಡಿಮೆ ಬಡ್ಡಿಯ ಸಾಲ ಒದಗಿಸಬೇಕು.

6. ರೈತರಿಗೆ ರಕ್ಷಣೆ ನೀಡಲು ಬೆಳೆಗೆ ಸಮಗ್ರ ಜೀವ ವಿಮೆಯೊಂದನ್ನು ಜಾರಿಯಲ್ಲಿ ತರಬೇಕು.

7. ಕೃಷಿ ಕಾರ್ಮಿಕರಿಗೆ ಉದ್ಯೋಗ ಮತ್ತು ಕನಿಷ್ಠ ವೇತನ ಸಿಗುವಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಗೆ ಹೆಚ್ಚು ಹಣ ನಿಗದಿ ಪಡಿಸಬೇಕು.

8. ಕೃಷಿ ಕಾರ್ಮಿಕರಿಗೆ ಕನಿಷ್ಠ ವೇತನ ನಿರ್ಧರಿಸಿ ಅವರ ಜೀವನ ಮಟ್ಟ ಸುಧಾರಿಸುವ ಕೇಂದ್ರ ಮಸೂದೆಯೊಂದು ಪಾಸಾಗಬೇಕು.

(ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸಭೆ ಮಾರ್ಚ 3–4 ರಂದು ಉತ್ತರ ಪ್ರದೇಶದ ಸುಲ್ತಾನ್‌ಪುರದಲ್ಲಿ ಸೇರಿತ್ತು. ಅದರ ವರದಿ ಮತ್ತು ನಿರ್ಣಯಗಳನ್ನು ಇಲ್ಲಿ ಕೊಟ್ಟಿದ್ದೇವೆ.)

ಪಂಜಾಬ್ ಕಿಸಾನ್ ಸಭಾ ಸಮಾವೇಶ

ರೈತರು ಕುರ್ತಾಗಿ ಎದುರಿಸುತ್ತಿರುವ ಸಮಸ್ಯೆಗಳಾದ ಬೆಳೆಗೆ ಯೋಗ್ಯ ಬೆಲೆ, ಸಾಕಷ್ಟು ಪ್ರಮಾಣದಲ್ಲಿ ಒಳ್ಳೆಯ ಒಕ್ಕಲತನದ ಗೊಬ್ಬರ ಹಾಗೂ ಇತರ ಅವಶ್ಯಕತೆಗಳ ಅಗ್ಗದರದಲ್ಲಿ ಪೂರೈಕೆ, ವಿದ್ಯುಚ್ಛಕ್ತಿ, ರಸಾಯನಿಕ ಗೊಬ್ಬರ, ಹಣ ಸಿಗುವಂತಾಗುವುದು, ರಾಜ್ಯದಲ್ಲಿ ಜಾತೀಯ ಸೌಹಾರ್ದತೆ ಮತ್ತು ಶಾಂತಿ ಕಾಪಾಡುವುದು ಹಾಗೆಯೇ ಅಮೇರಿಕದ ಸಾಮ್ರಾಜ್ಯಶಾಹಿಗಳ ಅಣುಯುದ್ಧದ ವಿರುದ್ಧ ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡಲು ಹೋರಾಟ ಬಲಗೊಳಿಸುವುದು, ಮುಂತಾದವುಗಳ ಸಲುವಾಗಿ ರೈತರೆಲ್ಲ ಸಂಯುಕ್ತ ಚಳುವಳಿ ಕಟ್ಟುವ ಕುರಿತು ಪಂಜಾಬಿನ ಕಿಸಾನ್ ಸಭೆಯ 27 ನೇ ಸಮಾವೇಶ ಕರೆಕೊಟ್ಟಿತು.

ರೈತರ ದೈನಂದಿನ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಸಲುವಾಗಿ ಗ್ರಾಮ ಮಟ್ಟದಲ್ಲಿ ರೈತ ಸಂಘದ ಕೆಲಸ ಚುರುಕಾಗಿ ನಡೆಯುವಂತೆ, ತಾಲ್ಲೂಕ್, ಜಿಲ್ಲಾ, ರಾಜ್ಯ ಮಟ್ಟದ ಕಮಿಟಿ ಕಚೇರಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡುವುದರ ಅವಶ್ಯಕತೆಯನ್ನೂ ಸಮಾವೇಶ ಒತ್ತಿ ಹೇಳಿತು. ವಿಶಾಲವಾದ ಮತ್ತು ಜಂಟೀ ಹೋರಾಟಗಳನ್ನು ಯಶಸ್ವಿಯಾಗಿ ನಡೆಸಬೇಕಾದರೆ. ಕಿಸಾನ ಸಭಾ ತನ್ನ ಸ್ವತಂತ್ರವಾದ ಚಟುವಟಿಕೆಗಳನ್ನೂ ಸಂಘಟನಾ ಶಕ್ತಿಯನ್ನೂ ಹೆಚ್ಚಿಸಿ ಕೊಳ್ಳುವುದು ಅತ್ಯಗತ್ಯವೆಂಬ ಅಂಶವನ್ನು ಸಮಾವೇಶವು ಹೊಸ ಮುಖಂಡತ್ವದ ಗಮನಕ್ಕೆ ತಂದಿತು. ಹಿಂದಿನ 2 ವರ್ಷಗಳ ಅನುಭವದಿಂದ ಕಲಿಯತಕ್ಕ ಪಾಠವೇನೆಂದರೆ, ಸಂಯುಕ್ತ ಚಳುವಳಿ ನಡೆಸಿದರೆ ಮನಸ್ಸಿಲ್ಲದ ಕಾಂಗ್ರೆಸ್ ಸರಕಾರದಿಂದ ಕೆಲವು ಸವಲತ್ತುಗಳನ್ನು ಪಡೆಯಲು ಸಾಧ್ಯ ಮತ್ತು ಅಂಥ ಜಂಟೀ ಹೋರಾಟಗಳನ್ನು ಏರ್ಪಡಿಸುವಾಗ ಪಂಜಾಬ್ ಕಿಸಾನ ಸಭೆಯ ಸ್ವತಂತ್ರ ಚಟುವಟಿಕೆ, ಕ್ರಿಯಾ ಶೀಲತೆ ಮತ್ತು ಮಹತ್ವ ಅತ್ಯಗತ್ಯ. ಬತಿಂಡಾ, ಫರೀದಕೋಟ, ಸಂಗರೂರ, ಫಿರೋಜಪುರ ಜಿಲ್ಲೆಗಳಿಂದ ಸರಕಾರ ರೂ. 140 ಕೋಟಿ ವಸೂಲಿ ಮಾಡಿದ್ದು ಇದರ ಪೈಕಿ ರೂ. 40 ಕೋಟಿಯಷ್ಟು ಹಣವನ್ನು ಅಂಥ ಸಂಯುಕ್ತ ಚಳುವಳಿಯ ಮೂಲಕ ಸರಕಾರದಿಂದ ರೈತರಿಗೆ ವಾಪಸ್ ಕೊಡಿಸಲು ಸಾಧ್ಯವಾಯಿತೆಂದೂ, ಕಬ್ಬು ಬೆಳೆಗಾರರು ಕ್ವಿಂಟಲಿಗೆ ರೂ. 20 ಮತ್ತು ರೂ. 23 ಪಡೆಯಲು ಸಾಧ್ಯವಾಗಿದೆಂದೂ, ಸರಕಾರ ಕೆಟ್ಟು ಹೋದ ಕ್ರಿಮಿನಾಶಕಗಳನ್ನು ರೈತರಿಗೆ ಪೂರೈಸಿದ ಕಾರಣದಿಂದಾಗಿ, ಹತ್ತಿ ಬೆಳೆಗಾರರು ಅಪಾರ ನಷ್ಟ ಅನುಭವಿಸಿದಾಗ, ಕೇಂದ್ರ ಸರಕಾರದಿಂದ ರೂ 10 ಕೋಟಿ ಧನಸಹಾಯ, ಪಂಜಾಬ್ ಸರಕಾರದಿಂದ ಕಂದಾಯ ಹಾಗೂ ನೀರಾವರಿ ತೆರಿಗೆ ಮಾಫಿ, ಮತ್ತು ರೂ 12·68 ಕೋಟಿ ಸಾಲದ ವಸೂಲಿಯ ಮುಂದೂಡಿಕೆ ಸಾಧಿಸಲು ಶಕ್ಯವಾಗಿದೆಂದು ಕೆಲವು ಉದಾಹರಣೆಗಳನ್ನು ವಿವರಿಸಲಾಯಿತು. ಅದೇ ಸಮಯದಲ್ಲಿ ಬಂಡವಾಳಶಾಹಿ ಭೂ. ಮಾಲಕರ ಮತ್ತು ಶ್ರೀಮಂತ ರೈತರ ಭಾರತಿ ಕಿಸಾನ ಯೂನಿಯನಿನ ಛಿದ್ರಕಾರಿ ಚಟುವಟಿಕೆ ಅವರ ಆಕರ್ಷಕ ಬೇಡಿಕೆಗಳು ಕ್ರಾಂತಿಕಾರಿ ಘೋಷಣೆಗಳ ಕುರಿತು ಎಚ್ಚರಿಕೆ ನೀಡಲಾಯಿತು.

ರೈತ ಸಂಘಟನೆ ಯಾವ ರೀತಿ ಕಟ್ಟಬೇಕು

—ಮಹಾರಾಷ್ಟ್ರದ ಅನುಭವ

ಮಹಾರಾಷ್ಟ್ರದಲ್ಲಿ ರೈತರ ಮಧ್ಯೆ ಕೆಲಸ ಮಾಡುತ್ತಿರುವ ಪಾರ್ಟಿ ಕಾರ್ಯಕರ್ತರ ಸಮಾವೇಶ ಫೆಬ್ರವರಿ ತಿಂಗಳಲ್ಲಿ ಸೇರಿ ಗ್ರಾಮಾಂತರ ಪ್ರದೇಶದಲ್ಲಿ ಕಳೆದ ಮೂರೂವರೆ ದಶಕಗಳ ಕಾಂಗ್ರೆಸ್ ಆಡಳಿತೆಯಿಂದಾಗಿ ಉದ್ಭವಿಸಿರುವ ಮುಖ್ಯ ಬದಲಾವಣೆಗಳು, ಭೂ ಸುಧಾರಣ ಧೋರಣೆ, ಅದರ ಪ್ರತಿಫಲ, ಸಹಕಾರಿ ಚಳುವಳಿಯ ವಿಮರ್ಶೆ ಅದರಿಂದ ಯಾರಿಗೆ ಲಾಭವಾಗಿದೆಂಬುದನ್ನು ಗುರುತಿಸುವುದು ಮುಂತಾದ ವಿಷಯಗಳ ಕುರಿತು ದೀರ್ಘ ಚರ್ಚೆಯಾಗಿ, ರೈತರ, ಕೃಷಿ ಕಾರ್ಮಿಕರ ಸಂಘಟನೆ-ಚಳುವಳಿಗಳನ್ನು ಮುಂದುವರಿಸಿ ಕೊಂಡು ಹೋಗಲು, ಬಲಪಡಿಸಲು ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ರೈತ-ಕೃಷಿ ಕಾರ್ಮಿಕರ ಮಧ್ಯೆ ಹೋಗಿ ಹೊಸ ಪ್ರದೇಶಗಳಲ್ಲಿ ಅವರ ನಿಕಟ ಸಂಪರ್ಕ ಬೆಳೆಸಬೇಕು. ಮುಖಂಡರೂ, ಕಾರ್ಯಕರ್ತರೂ ಅವರಲ್ಲೊಬ್ಬರಾಗಿ ಬೆರೆತು ಅವರ ಸಮಸ್ಯೆಗಳನ್ನು ತಿಳಿದು, ಅವರ ಹೋರಾಟಗಳನ್ನು ಕ್ರಾಂತಿಕಾರಿ ರೂಪದಲ್ಲಿಯೂ, ಸತತವಾಗಿಯೂ ನಡೆಸಬೇಕು.

2. ಈ ರೀತಿ ಮಾಡುವಾಗ ವಿಶಾಲವಾದ ರಾಜಕೀಯ ಧೋರಣೆಗನುಸಾರವಾಗಿ ರೈತರ ವಿವಿಧ ವಿಭಾಗಗಳ ಮತ್ತು ಕೃಷಿ ಕಾರ್ಮಿಕರೊಳಗೆ ಬಲಿಷ್ಠವಾದ ಐಕ್ಯತೆಯನ್ನು ಬೆಳೆಸಿ, ಭೂ ಮಾಲಕರ ವರ್ಗದ ವಿರುದ್ಧ ಮಾತ್ರ ಹೋರಾಟ ಮುಂದುವರಿಸಬೇಕು. ಈ ಐಕ್ಯತೆಯ ಮೂಲ ಮುಖ್ಯವಾಗಿ ಕೃಷಿ ಕಾರ್ಮಿಕ ಮತ್ತು ಬಡ ರೈತರದ್ದಾಗಿರಬೇಕು. ಇದೆಲ್ಲ ಆಗಬೇಕಾದರೆ ರೈತ ರಂಗದಲ್ಲಿ ಪಾರ್ಟಿಯ ಕೆಲಸಕ್ಕೆ ಹೆಚ್ಚು ಗಮನ ಹರಿಸುವುದು ಅಗತ್ಯ.

3. ರೈತರ ಚಳುವಳಿಗೆ ಕಾರ್ಮಿಕ ವರ್ಗ ಹೋರಾಟ, ರಾಜಕೀಯ ಶಿಕ್ಷಣ, ನಿಜವಾದ ಸಹಾಯಗಳನ್ನು ನೀಡುವುದರ ಮೂಲಕ ರೈತಾಪಿ ಕ್ರಾಂತಿಯಲ್ಲಿ ಕಾರ್ಮಿಕ ವರ್ಗದ ಮುಖಂಡತ್ವದ ಪಾತ್ರವನ್ನು ಸ್ಥಾಪಿಸಬೇಕು. ಇದಾಗಬೇಕಾದರೆ ಮಹಾರಾಷ್ಟ್ರದ ಕಾರ್ಮಿಕ ವರ್ಗದ ಚಳುವಳಿಯಲ್ಲಿ ಆರ್ಥಿಕವಾದ ಮತ್ತು ಅಂಥದೇ ಇತರ ಪ್ರಮೇಯಗಳ ವಿರುದ್ಧ ತೀವ್ರವಾದ ಸೈದ್ಧಾಂತಿಕ ಹೋರಾಟ ನಡೆಸುವುದು ಅತ್ಯಗತ್ಯ.

ಮಹಾರಾಷ್ಟ್ರದ ಪರಿಸ್ಥಿತಿಯೇ ಹೆಚ್ಚು ಕಡಿಮೆ ಕರ್ನಾಟಕದಲ್ಲಿ ಕೂಡ ಇರುವುದರಿಂದ ರುದ್ರಪ್ಪನವರ ನೇತೃತ್ವದ ರೈತ ಸಂಘ ಹಾಗೆಯೇ ಭೂ ಮಾಲಕರ, ಸರಕಾರದ ನೀತಿ ಧೋರಣೆಗಳ ವಿರುದ್ಧ ಹೋರಾಡಲು ಕರ್ನಾಟಕದಲ್ಲೂ ಬಲಿಷ್ಠವಾದ ರೈತರ, ಕೃಷಿ ಕಾರ್ಮಿಕರ ಸಂಘಟನೆ ಕಟ್ಟಲು ಮಹಾರಾಷ್ಟ್ರ ಸಮಾವೇಶದ ನಿರ್ಣಯ ಸಹಾಯಕವಾದೀತು.

ಎ. ಕೆ. ಜಿ. ಮತ್ತು ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ

ವಿ. ಜೆ. ಕೆ. ನಾಯರ್

ತುರ್ತು ಪರಿಸ್ಥಿತಿಯ ನಂತರದ ಅವಧಿಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಐಕ್ಯತೆಯ ಘೋಷಣೆ ಹೆಚ್ಚು ಪ್ರಚಲಿತವಾಗಿದೆ. ಎ.ಕೆ.ಜಿ. ಯವರ ಮರಣದ ಒಂದು ವರ್ಷದ ನಂತರ (ಏಪ್ರಿಲ್ 1978) ನಡೆದ ಜಲಂಧರ್ ಸಮ್ಮೇಳನದಲ್ಲಿ ಅವರ ಪಕ್ಷವಾದ ಸಿ.ಪಿ.ಐ (ಎಂ) ಈ ಧೋರಣೆಯನ್ನು ರೂಪಿಸಿ ದೇಶದ ಮುಂದಿಟ್ಟಿದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯ ಅವಶ್ಯಕತೆ ಯಾವಾಗಲೂ ಇತ್ತು. ಎ.ಕೆ.ಜಿ. ಯವರ ಜೀವನದ ಅವಧಿಯುದ್ದಕ್ಕೂ ಈ ಐಕ್ಯತೆಯನ್ನು ರೂಪಿಸಲು ಮತ್ತು ಬೆಳೆಸಲು ಅವರ ಪಕ್ಷದ ಪ್ರಯತ್ನ ನಿರಂತರವಾಗಿ ಸಾಗಿತ್ತು. ಎ.ಕೆ.ಜಿ. ಯವರ ಮಾತಿನಲ್ಲಿಯೇ ಹೇಳುವುದಾದರೆ ಅವರ ಜೀವನದ ಮುಖ್ಯ ಸಾರವೇ ಸ್ವಾತಂತ್ರ್ಯಕ್ಕಾಗಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಶೋಷಣೆಯ ವಿರುದ್ಧ ಜನತೆ ನಡೆಸಿದ ಹೋರಾಟಗಳಲ್ಲಿ ಪಾಲ್ಗೊಳ್ಳುವುದು ಮತ್ತು ಅವುಗಳಿಂದ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು. (ಅವರ ಆತ್ಮ ಚರಿತ್ರೆಯ ಕೊನೆಯ ಪ್ಯಾರಾ ನೋಡಿ) ಈ ಹೋರಾಟ ಎಡ ಮತ್ತು ಪ್ರಜಾಸತ್ತಾತ್ಮಕ ಹೋರಾಟವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಈ ಪ್ರಬಂಧ ಎಡ ಮತ್ತು ಪ್ರಜಾಸತ್ತಾತ್ಮಕ ಐಕ್ಯತೆಯ ಪರಿಕಲ್ಪನೆಯ ಬೆಳವಣಿಗೆಯನ್ನು ಅವರ ಆತ್ಮ ಚರಿತ್ರೆಯ ಮೂಲಕ ಶೋಧಿಸುವುದಾಗಿದೆ. ಈ ಐಕ್ಯತೆಯನ್ನು ಸಾಧಿಸುವುದರ ಅತ್ಯಾವಶ್ಯಕತೆ ಮತ್ತು ಎ.ಕೆ.ಜಿ. ಯವರು ಮತ್ತು ಅವರ ಪಕ್ಷ ಈ ಐಕ್ಯತೆಯನ್ನು ಘೋಷಿಸುವುದಕ್ಕೆ ಮಾಡಿದ ಪ್ರಾಮಾಣಿಕ ಪ್ರಯತ್ನಗಳನ್ನು ನಿಮ್ಮ ಮುಂದಿಡುವುದು. ವಿವಿಧ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ನಿಲುವುಗಳು ಎ.ಕೆ.ಜಿ. ಯವರು ಹೇಳಿದ ಸ್ವಾತಂತ್ರ್ಯಕ್ಕಾಗಿ, ಸಾಮಾಜಿಕ ನ್ಯಾಯಕ್ಕಾಗಿ ಶೋಷಣೆಯ ವಿರುದ್ಧ ನಡೆಸುವ ಹೋರಾಟಗಳ ಮೂಲ ಉದ್ದೇಶಕ್ಕೆ ದೂರವಾಗಿರುವುದು ಮತ್ತು ಜನತೆಯ ನಿರಂತರ ಹೋರಾಟ ವಿವಿಧ ಶಕ್ತಿಗಳ ಸಮೀಕರಣವನ್ನು ಬದಲಿಸಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯ ಪುನಸ್ಥಾಪನೆಯಾಗಿರುವುದನ್ನು ಗುರುತಿಸುವುದು ಕೂಡ ಈ ಪ್ರಬಂಧದ ಉದ್ದೇಶವಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ಈ ಶಕ್ತಿಗಳ ನೋಡುತ್ತಿರುವ ರೀತಿ ಅದನ್ನು ಅನುಷ್ಠಾನಕ್ಕೆ ತರುತ್ತಿರುವ ರೀತಿಯನ್ನು ಪ್ರಬಂಧ ಪರಿಶೀಲಿಸುತ್ತದೆ ಮತ್ತು ಎ.ಕೆ.ಜಿ. ಯವರ ಪಕ್ಷದ ಸರಿಯಾದ ದೃಷ್ಟಿಕೋನವನ್ನು ಪುಷ್ಟೀಕರಿಸುತ್ತದೆ.

"ಈ ಪರಿಕಲ್ಪನೆಯ" ಬೆಳವಣಿಗೆಯನ್ನು ಗುರುತಿಸಲು ಎ.ಕೆ.ಜಿ.ಯವರ ಮಾತುಗಳಿಗಿಂತ ಉತ್ತಮವಾದ ವಿವರಣೆ ದೊರೆಯದು. ಅದುದರಿಂದ ಅವರ ಆತ್ಮಚರಿತ್ರೆ "ನನ್ನ ಜೀವನದ ಕಥೆ"ಯಿಂದ ಅವರದೇ ಮಾತುಗಳನ್ನೇ ಯಥೇಚ್ಛವಾಗಿ ಬಳಸಿದ್ದೇನೆ. (ಭಾರತೀ ಪ್ರಕಾಶನದವರ ಪ್ರಕಟಣೆಯನ್ನು ನೋಡಿ)

ಎ.ಕೆ.ಜಿ. ಯವರ ಆತ್ಮ ಕಥೆಯಲ್ಲಿ ಅನೇಕ ಬಾರಿ ಎಡ ಐಕ್ಯತೆಯನ್ನು ಉಲ್ಲೇಖಿಸಿದೆ. ನಾನು ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ಕೆಲವು ಘಟನೆಗಳನ್ನು ಮಾತ್ರ ಪ್ರಬಂಧದಲ್ಲಿ ಉಲ್ಲೇಖಿಸುತ್ತೇನೆ.

ತಿರುವಾಂಕೂರು-ಕೊಚ್ಚಿನ್ 1951-52

ಪಕ್ಷ 1951 ರಲ್ಲಿ ಕಾನೂನು ಬದ್ಧವಾದ ಕೂಡಲೇ ಮಧುರೈ ಸಮ್ಮೇಳನ ಜರುಗಿತು. ದೇಶದ ನಾನಾ ಭಾಗಗಳಲ್ಲಿರುವ ಎಡ ರಾಜಕೀಯ ಶಕ್ತಿಗಳನ್ನು ಒಟ್ಟಿಗೆ ತಂದು ಕಾಂಗ್ರೆಸ್ಸಿಗೆ ಪ್ರತಿಯಾಗಿ ಪ್ರಬಲವಾದ ಒಂದು ಸಂಯುಕ್ತ ಎಡರಂಗವನ್ನು ನಿರ್ಮಿಸಲು ತೀರ್ಮಾನಿಸಿದ ಮಧುರೈ ಅಧಿವೇಶನವು ಒಂದು ಹೊಸ ದೃಷ್ಟಿಕೋನ ಮತ್ತು ಹೊಸ ಕಾರ್ಯವಿಧಾನದ ನಾಂದಿಯಾಗಿತ್ತು. ತಿರುವಾಂಕೂರು-ಕೊಚ್ಚಿನ್ ರಾಜ್ಯದಲ್ಲಿನ ಬೆಳವಣಿಗೆಗಳನ್ನು ಮತ್ತು ಅಲ್ಲಿ ಕಾಂಗ್ರೆಸ್ ವಿರೋಧಿ ಎಡ ಐಕ್ಯತೆಯ ಧೋರಣೆಯನ್ನು ಎ.ಕೆ.ಜಿ. ಕೆಳಗಿನಂತೆ ಗುರುತಿಸುತ್ತಾರೆ.

"ಮಧುರೈ ಅಧಿವೇಶನ ಕಳೆದ ಸ್ವಲ್ಪ ಸಮಯದಲ್ಲೇ ತಿರುವಾಂಕೂರು-ಕೊಚ್ಚಿಯ ಮಂತ್ರಿಮಂಡಲದಲ್ಲಿ ಬಿಕ್ಕಟ್ಟು ತಲೆದೋರಿತು. ಕಾಂಗ್ರೆಸಿನೊಳಗಿನ ಬಿಕ್ಕಟ್ಟು ಹೆಚ್ಚಾದುದರಿಂದ, ಹೊರಗಿನಿಂದ ಯಾವುದೇ ಒತ್ತಡ ಇರದಿದ್ದರೂ ಮಂತ್ರಿಮಂಡಲವು ಕುಸಿದು ಬಿತ್ತು. ಪ್ರಜಾಪ್ರಭುತ್ವದ ಕಟ್ಟಾ ಅನುಯಾಯಿಯೆಂದು ಕೊಚ್ಚಿಕೊಳ್ಳುತ್ತಿದ್ದ ಕಾಂಗ್ರೆಸ್ ಮುಖ್ಯಮಂತ್ರಿ ಪನಂಪಿಳ್ಳೈ ಗೋವಿಂದ ಮೆನನ್ ರಾಜೀನಾಮೆಯನ್ನೇನೋ ಕೊಟ್ಟರು; ಆದರೆ ಐವರ್ ಜೆನ್ನಿಂಗ್ಸ್‌ನ ಸಂವಿಧಾನ ಪುಸ್ತಕಗಳಲ್ಲಿದ್ದ ಕೆಲವೊಂದು ಅಂಶಗಳ ನೆರಳಲ್ಲಿ ರಕ್ಷಣೆ ಪಡೆದು, "ಕೇರ್ ಟೇಕರ್" ಸರಕಾರವೆಂಬ ನೆಲೆಯಲ್ಲಿ ಅಧಿಕಾರದಲ್ಲಿ ಮುಂದುವರಿದರು. ಕಮ್ಯೂನಿಸ್ಟ್, ಪಿ.ಎಸ್.ಪಿ. ಮೊದಲಾದ ವಿರೋಧ ಪಕ್ಷಗಳಿಗೆ ಮಂತ್ರಿಮಂಡಲ ರಚಿಸಲು ಅವಕಾಶ ಸಿಗದಂತೆ ಮಾಡಲು ಈ ಕ್ರಮ ಕೈಗೊಂಡರು. ಹೇಗಾದರೂ ಅಧಿಕಾರಕ್ಕೆ ಅಂಟಿಕೊಂಡು, ಆ ಅಧಿಕಾರದ ಮೂಲಕ ಚುನಾವಣೆಯಲ್ಲಿ ಗೆಲ್ಲುವುದು ಅವರ ಉದ್ದೇಶವಾಗಿತ್ತು. ಈ ಪ್ರಜಾಪ್ರಭುತ್ವ ವಿರೋಧಿ ಕ್ರಮಕ್ಕೆ ಕೇಂದ್ರವು ಮೌನ ಸಮ್ಮತಿ ಸೂಚಿಸಿತು. ನಾವು ಈ ಪ್ರಶ್ನೆಯನ್ನು ಪಾರ್ಲಿಮೆಂಟಿನಲ್ಲಿ ಎತ್ತಿದಾಗ, ರಾಜ್ಯ ಸರಕಾರದ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲವೆಂದು ಹೇಳಿ ಅವರು ಜಾರಿಕೊಂಡರು. ಏನಿದ್ದರೂ ಅನತಿ ಕಾಲದಲ್ಲೇ ಸಾರ್ವತ್ರಿಕ ಚುನಾವಣೆ ನಡೆಯಿತು.

ಕಮ್ಯೂನಿಸ್ಟ್ ಪಾರ್ಟಿ, ಪಿ.ಎಸ್.ಪಿ ಆರ್. ಎಸ್. ಪಿ., ಮತ್ತು ಕೆ. ಎಸ್. ಪಿ. ಪಕ್ಷಗಳು ಐಕ್ಯರಂಗವನ್ನು ನಿರ್ಮಿಸಿ ಚುನಾವಣೆಯಲ್ಲಿ ಸ್ಪರ್ಧಿಸಿದವು. ಜನತೆ ಈ ಎಡ ಪಕ್ಷಗಳ ಐಕ್ಯವನ್ನು ಸ್ವಾಗತಿಸಿತು. ಆದರೆ ಕೇರಳದ ಪ್ರಜಾಪ್ರಭುತ್ವ ಚಳುವಳಿಯ ದುರದೃಷ್ಟದಿಂದ ಪಿ.ಎಸ್.ಪಿ. ಯು ತನ್ನ ಹಿಂದಿನ ಪರಂಪರೆಯಂತೆಯೇ ಕಪಟ ಧೋರಣೆ ಅನುಸರಿಸಿತು. ಐಕ್ಯರಂಗದಲ್ಲಿರುವುದಾಗಿ ನಟನೆ ಮಾಡುತ್ತಾ ಬಂದ ಪಿ.ಎಸ್.ಪಿ.ಯು ಕಾಂಗ್ರೆಸಿನೊಂದಿಗೆ ಸೇರಿ ಪಿ.ಎಸ್.ಪಿ. ಮಂತ್ರಿಮಂಡಲವೊಂದನ್ನು ರಚಿಸಿತು. ಆದರೆ ಈ ಐಕ್ಯವು ಹೆಚ್ಚು ಕಾಲ ಉಳಿಯಲಿಲ್ಲ. ವಿರೋಧ ಪಕ್ಷದಲ್ಲಿದ್ದುಕೊಂಡೇ ಸರಕಾರಕ್ಕೆ ಬೆಂಬಲ ಕೊಡುತ್ತಿದ್ದ ಕಾಂಗ್ರೆಸ್ಸು, ಹನ್ನೊಂದು ತಿಂಗಳುಗಳ ನಂತರ ಪಿ.ಎಸ್.ಪಿ ಮಂತ್ರಿಮಂಡಲವು ಭೂಮಸೂದೆಯೊಂದನ್ನು ಮಂಡಿಸಲು ಸಿದ್ಧತೆ ಮಾಡುತ್ತಿದ್ದಾಗ ಮಂತ್ರಿಮಂಡಲವನ್ನು ಉರುಳಿಸಿ ತಮಿಳುನಾಡು ಕಾಂಗ್ರೆಸಿನ ಜತೆ ಸೇರಿ ತನ್ನದೇ ಮಂತ್ರಿಮಂಡಲವನ್ನು ರಚಿಸಿತು. ಪಿ.ಎಸ್.ಪಿ. ಆಡಳಿತದ ಸಮಯದಲ್ಲಿ ಪ್ರಸಿದ್ಧವಾದ ಸಾರಿಗೆ ಮುಷ್ಕರವು ತಮಿಳುನಾಡು ಸಮಸ್ಯೆಯೂ ಬೆಳೆದು ಬಂದವು. ಇವೆರಡನ್ನೂ ಸದೆಬಡಿಯಲಾಯಿತು. ತಮಿಳುನಾಡಿನಲ್ಲಿ ಪೋಲೀಸ್ ಗೋಲೀಬಾರು ನಡೆಯಿತು. ಹೀಗೆ ಪಿ.ಎಸ್.ಪಿ.ಯನ್ನು ಜನತೆಯಿಂದ ಬೇರ್ಪಡಿಸಿದ ನಂತರ ಕಾಂಗ್ರೆಸ್ಸು ಪಿ.ಎಸ್.ಪಿ. ಮಂತ್ರಿಮಂಡಲವನ್ನು ಉರುಳಿಸಿತು."

ಮೇಲೆ ಉಲ್ಲೇಖಿಸಿದ ಭಾಗದಲ್ಲಿ ಐಕ್ಯತೆಯ ಪರಿಕಲ್ಪನೆಯನ್ನು ಗುರುತಿಸಲು ಎಡ ಮತ್ತು ಪ್ರಜಾಸತ್ತಾತ್ಮಕ ಪದಗಳ ಕೆಳಗೆ ಗೆರೆ ಎಳೆದಿದ್ದೇನೆ. ಸ್ವಾತಂತ್ರ್ಯ, ಸಾಮಾಜಿಕ ನ್ಯಾಯಕ್ಕಾಗಿ ಮತ್ತು ಶೋಷಣೆಯನ್ನು ಕೊನೆಗಾಣಿಸುವುದು ಎಡ ಪರ್ಯಾಯದಿಂದ ಅಲ್ಲದೆ ಮತ್ತೆ ಯಾವುದರಿಂದಲೂ ಸಾಧ್ಯವಿಲ್ಲ. ಅದಕ್ಕಾಗಿ ಪಕ್ಷ ಎಡ ಐಕ್ಯತೆಯನ್ನು ಸಾಧಿಸಲು ಶ್ರಮಿಸಿತು. ಅದೇ ಸಮಯದಲ್ಲಿ, ಕಾಂಗ್ರೆಸ್ ಪ್ರಜಾಪ್ರಭುತ್ವದ ಮುಖವಾಡವನ್ನು ತೊಟ್ಟಿದ್ದರೂ, 1952 ರಲ್ಲಿಯೇ ತನ್ನ ಸರ್ವಾಧಿಕಾರಿ ಅಭಿಲಾಷೆಯನ್ನು ಮುಚ್ಚಿಡಲಿಲ್ಲ ಎಂಬುದನ್ನು ಗುರುತಿಸಬೇಕು. ಕಾಂಗ್ರೆಸ್‌ನ ಈ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ವಿರೋಧಿಸಲು ಕಮ್ಯೂನಿಸ್ಟರ, ಸಮಾಜವಾದಿಗಳ ಐಕ್ಯರಂಗ ಸ್ಥಾಪನೆ ಪ್ರಜಾಸತ್ತಾತ್ಮಕ ಚಳುವಳಿಯನ್ನು ಮುಂದುವರಿಸುವ ಹೆಜ್ಜೆಯಾಗಿತ್ತು. ಆದುದರಿಂದಲೇ ಎ.ಕೆ.ಜಿ. ಪ್ರಜಾ ಸಮಾಜವಾದಿ ಪಕ್ಷ ಐಕ್ಯರಂಗದಿಂದ ಹೊರ ಹೋಗಿದ್ದನ್ನು ಪ್ರಜಾಸತ್ತಾತ್ಮಕ ಚಳುವಳಿಯ ಹಿನ್ನಡೆ ಎಂದು ವರ್ಣಿಸಿದರು.

ಈ ಮೊಟ್ಟಮೊದಲ ಪ್ರಸಂಗದಿಂದಲೇ ಕಾಂಗ್ರೆಸ್ ರೂಪಿಸಿಕೊಂಡ ಕಾರ್ಯವಿಧಾನವನ್ನು ನೋಡಬಹುದು. ಮೊದಲನೆಯದಾಗಿ ಅಧಿಕಾರದಲ್ಲಿ ಮುಂದುವರಿಯಲು ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಅನುಸರಿಸಿತು. ಎರಡನೆಯದಾಗಿ ಚುನಾವಣೆಗಳಲ್ಲಿ ಸೋತಾಗ ಪಿ.ಎಸ್.ಪಿ. ಸಂಪುಟವನ್ನು ಅಧಿಕಾರಕ್ಕೆ ತರುವುದರ ಮೂಲಕ ಒಡೆಯಿತು. ಮೂರನೆಯದಾಗಿ ತಿರುವಾಂಕೂರಿನಿಂದ ತಮಿಳು ಭಾಷೆಯನ್ನಾಡುವ ಜನರ ಬೇರ್ಪಡೆ ಚಳುವಳಿ ನಡೆಸಲು ತಮಿಳುನಾಡು ಕಾಂಗ್ರೆಸ್‌ಗೆ ಪ್ರೋತ್ಸಾಹ ನೀಡಿತು. ಸಾರಿಗೆ ಕೆಲಸಗಾರರ ಹೋರಾಟದಲ್ಲಿ ಕೂಡ ಕೈಯಾಡಿಸಿತು. ಇದರ ಪರಿಣಾಮವಾದ ಸಾಮೂಹಿಕ ಆಂದೋಲನವನ್ನು ಪಿ.ಎಸ್.ಪಿ. ಮಂತ್ರಿಮಂಡಲವನ್ನು ಪಯೋಗಿಸಿ ಹತ್ತಿಕ್ಕಲಾಯಿತು. ಐದನೆಯದಾಗಿ ಪಿ.ಎಸ್.ಪಿ. ಮಂತ್ರಿಮಂಡಲಕ್ಕೆ ಮುಸಿಬಳೆದು ತಮಿಳುನಾಡು ಕಾಂಗ್ರೆಸ್ಸನ್ನು ಅದಕ್ಕೆ ಎದುರಾಗಿ ಉಪಯೋಗಿಸಿ ಮಂತ್ರಿಮಂಡಲವನ್ನು ರಚಿಸಿತು. ಭೂ ಸುಧಾರಣೆ ಕ್ರಮಗಳನ್ನು ಜಾರಿಗೆ ತರುವುದನ್ನು ತಪ್ಪಿಸುವುದಕ್ಕಾಗಿಯೇ ಕಾಂಗ್ರೆಸ್ ಇಷ್ಟೆಲ್ಲಾ ಶ್ರಮ ವಹಿಸಿತು. ಕಾಂಗ್ರೆಸ್‌ನ ಪ್ರಜಾಪ್ರಭುತ್ವ ವಿರೋಧಿ ಪ್ರತಿಗಾಮಿ ಧೋರಣೆಯನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದು. ಈ ಧೋರಣೆಗೆ ವಿರುದ್ಧವಾದುದನ್ನು ಸ್ಪಷ್ಟವಾಗಿ ಹೇಳದಿದ್ದರೂ ಎಡ ಮತ್ತು ಪ್ರಜಾಪ್ರಭುತ್ವವಾದಿ ಧೋರಣೆಯಾಗಿರಲೇ ಬೇಕಾಗುತ್ತದೆ.

ಕೇರಳ 1957

"1957 ರ ಫೆಬ್ರವರಿ-ಮಾರ್ಚ್ ಸಮಯದಲ್ಲಿ ಪುನರ್ಸಂಘಟಿತ ರಾಜ್ಯಗಳಲ್ಲಿ ಎರಡನೇ ಸಾರ್ವತ್ರಿಕ ಚುನಾವಣೆಗಳು ನಡೆದುವು....

ಕಮ್ಯೂನಿಸ್ಟ್ ಪಾರ್ಟಿಗೆ ಐದು ವರ್ಷಗಳ ಶಾಸನಸಭೆ ಮತ್ತು ಪಾರ್ಲಿಮೆಂಟ್ ಚಟುವಟಿಕೆಗಳ ಒಳ್ಳೆಯ ದಾಖಲೆಯನ್ನು ಜನತೆಯ ಮುಂದಿಡಲು ಸಾಧ್ಯವಾಯಿತು. ಕಮ್ಯೂನಿಸ್ಟ್ ಸದಸ್ಯರು ಇಂತಹ ಚಟುವಟಿಕೆಗಳಲ್ಲಿ ಮೊದಲ ಬಾರಿಗೆ ಭಾಗವಹಿಸುವುದಾಗಿದ್ದರೂ, ದೇಶದ ಸಮಸ್ಯೆಗಳನ್ನು ಜನರ ಮುಂದಿಟ್ಟು ಅನ್ಯಾಯಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಹೋರಾಡಲು ಅವರಿಗೆ ಸಾಧ್ಯವಾಯಿತು. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿದ್ದುಕೊಂಡೇ ಅವರು ಈ ಕೆಲಸವನ್ನು ಶ್ಲಾಘನೀಯವಾಗಿ ನಿರ್ವಹಿಸಿದರು.

ಕಮ್ಯೂನಿಸ್ಟ್ ಪಾರ್ಟಿಯು ದೊಡ್ಡ ರೀತಿಯ ಹೊಂದಾಣಿಕೆಗಳಿಗೆ ಸಿದ್ಧವಾಗಿದ್ದರೂ ಕೇರಳದಲ್ಲಿ ಎಡಪಕ್ಷಗಳ ಐಕ್ಯರಂಗವೊಂದನ್ನು ರಚಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಪಿ.ಎಸ್.ಪಿ., ಆರ್.ಎಸ್.ಪಿ. ಮೊದಲಾದ ಪಕ್ಷಗಳು ಕಾಂಗ್ರೆಸ್ ವಿರೋಧಿಗಳೆಂದು ಪ್ರಚಾರ ಮಾಡುತ್ತಿದ್ದರೂ, ಕಾಂಗ್ರೆಸಿಗಿಂತಲೂ ಕಮ್ಯೂನಿಸ್ಟ್ ಪಾರ್ಟಿಯೇ ದೊಡ್ಡ ಶತ್ರುವೆಂದು ಅವರು ಪರಿಗಣಿಸಿದ್ದರು.

ನಾನು ಅಭ್ಯರ್ಥಿಯಾಗಿದ್ದ ಕಾಸರಗೋಡು ಪಾರ್ಲಿಮೆಂಟರಿ ಕ್ಷೇತ್ರದಲ್ಲಿ ಈ ಅಪಪ್ರಚಾರಗಳ ನಗ್ನಸ್ವರೂಪ ಎದ್ದು ಕಾಣುತ್ತಿತ್ತು....ಇಲ್ಲಿ ಕಾಂಗ್ರೆಸ್ ಪಿ.ಎಸ್.ಪಿ. ಮುಸ್ಲಿಂ ಲೀಗ್, ಮತ್ತು ಆರ್.ಎಸ್.ಪಿ. ಯನ್ನೊಳಗೊಂಡ ಕೂಟವು ನನ್ನನ್ನು ಸೋಲಿಸುವ ದೃಢ ನಿಶ್ಚಯದಿಂದ ಕೆಲಸ ಮಾಡಿತು. ಶ್ರೀಮಂತರೆಲ್ಲರೂ ಅವರೊಂದಿಗೆ ಸೇರಿ ಧಾರಾಳ ಹಣ ಖರ್ಚು ಮಾಡಿದರು. ಭಾಷಣಕ್ಕೆ ನೆಹರೂರವರನ್ನ ಕರೆತಂದರು. ಅಂದಿನವರೆಗೆ ಮುಸ್ಲಿಂ ಲೀಗನ್ನು ಸಂಗ್ರಹಾಲಯದಲ್ಲಿಡಬೇಕಾದ ವಸ್ತುವೆಂದು ಹೇಳುತ್ತಿದ್ದ ನೆಹರೂ ನನ್ನ ಚುನಾವಣಾ ಕ್ಷೇತ್ರಕ್ಕೆ ಬಂದಾಗ ಆ ಗುಂಪಿನೊಂದಿಗೆ ಸಹಕರಿಸಿದ್ದು ಉಲ್ಲೇಖನೀಯ. ನನ್ನ ಸೋಲನ್ನು ಆಚರಿಸಲು ಅವರು ಕೇರಳದ ಮೂಲೆ ಮೂಲೆಗಳಲ್ಲಿ ವ್ಯವಸ್ಥೆ ಮಾಡಿದರು.... ಆದರೆ ಕೇರಳದ ಪ್ರಜ್ಞಾವಂತ ಜನತೆ ಅವರನ್ನು ನಿರಾಶೆಗೊಳಿಸಿತು.

ನನ್ನ ವಿಜಯವು ಹಲವಾರು ವಿಜಯಗಳಿಗೆ ನಾಂದಿಯಾಗಿತ್ತು. ಒಂದು ವಾರದೊಳಗೆ, ಪಾರ್ಟಿ ಅಭ್ಯರ್ಥಿಗಳ ಮತ್ತು ಪಾರ್ಟಿ ಬೆಂಬಲಿತ ಪಕ್ಷಾತೀತ ಅಭ್ಯರ್ಥಿಗಳ ಪೈಕಿ ಕೇರಳದಲ್ಲಿ ಸರಕಾರ ರಚಿಸಲು ಬೇಕಾದಷ್ಟು ಸದಸ್ಯರು ಚುನಾಯಿಸಲ್ಪಟ್ಟಿದ್ದಾರೆಂಬ ವಾರ್ತೆ ಪ್ರಕಟವಾಯಿತು. ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ಚುನಾವಣೆಯ ಮೂಲಕ ಕಮ್ಯೂನಿಸ್ಟ್ ಪಾರ್ಟಿಯು ಒಂದು ರಾಜ್ಯದಲ್ಲಿ ಅಧಿಕಾರಕ್ಕೆ ಬಂತು."

ಎ.ಕೆ.ಜಿ. ಯವರ ಆತ್ಮಚರಿತ್ರೆಯ 25 ನೇ ಅಧ್ಯಾಯ ಕೇರಳದ ಕಮ್ಯೂನಿಸ್ಟ್ ಸರಕಾರ ಜನಪರ ನೀತಿಗಳನ್ನು ಅನುಷ್ಠಾನಕ್ಕೆ ತಂದದ್ದು "ಬಿಡುಗಡೆಯ ಹೋರಾಟ"ವೆಂಬ ಹೆಸರಿನ ಪ್ರತಿಗಾಮಿಗಳ ಸಂಚು, ಸರ್ಕಾರವನ್ನು ವಜಾ ಮಾಡಿದ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ಬಗ್ಗೆ ವಿವರಗಳನ್ನು ನೀಡುತ್ತದೆ.

ನೆಹರು ಮತ್ತು ಇಂದಿರಾಗಾಂಧಿಯ ನೇತೃತ್ವದಲ್ಲಿದ್ದ ಕಾಂಗ್ರೆಸ್, ಕೇಂದ್ರ ಹಸ್ತಕ್ಷೇಪಕ್ಕೆ ಆಶೀರ್ವಾದ ನೀಡಿತು. ಅಂದಿನವರೆಗೆ ತಾವು ಧರಿಸಿದ್ದ ಪ್ರಜಾಪ್ರಭುತ್ವದ ಮುಖವಾಡವನ್ನು ಅವರು ಕಿತ್ತೆಸೆದರು. "ಎಡ ಪಕ್ಷಗಳ" ಪಾತ್ರವೂ ಅತ್ಯಂತ ನಾಚಿಕೆಗೇಡಿನದ್ದಾಗಿತ್ತು.

ಪಟ್ಟಂತಾನು ಪಿಳ್ಳೆಯ ನೇತೃತ್ವದ ಪಿ.ಎಸ್.ಪಿಯೂ., ಆರ್. ಎಸ್. ಪಿ. ಯೂ., "ವಿಮೋಚನಾ ಸಮರ" ದಲ್ಲಿ ಪ್ರತಿಗಾಮಿಗಳ ಜೊತೆ ಸೇರಿ ಹಿಂಸಾಚರಣೆಗೆ ಇಳಿದವು.

ಅಲ್ಪಾವಧಿಯದ್ದಾದರೂ ಈ 28 ತಿಂಗಳುಗಳ ಕಾಲ ಅಭಿಮಾನಾರ್ಹವಾದ ಕಾಲಘಟ್ಟವಾಗಿತ್ತು. ದುಡಿಯುವ ಜನರ ಜೀವನ ಮಟ್ಟವನ್ನು ಮೇಲೆತ್ತಲೂ, ಸಂಕಷ್ಟದಲ್ಲಿದ್ದ ಜನರಿಗೆ ಸ್ವಲ್ಪವಾದರೂ ಪರಿಹಾರ ಕೊಡಲೂ, ಅವರ ರಾಜಕೀಯ ಪ್ರಜ್ಞೆಯನ್ನು ಬೆಳೆಸಲೂ ಕ್ರಮ ಕೈಕೊಳ್ಳಲಾಯಿತು. ಹೀಗೆಂದು, ಸರಕಾರದಿಂದ ಕುಂದುಕೊರತೆಗಳೂ ತಪ್ಪುಗಳೂ ಆಗಿಲ್ಲವೆಂದು ತಿಳಿದುಕೊಳ್ಳಬಾರದು. ತಪ್ಪುಗಳು ಖಂಡಿತವಾಗಿಯೂ ಆಗಿವೆ. ಆದರೆ ಅವುಗಳು ಬೂರ್ಶ್ವಾ ಆಡಳಿತ ಚೌಕಟ್ಟಿನಲ್ಲಿದ್ದುಕೊಂಡು. ಬೂರ್ಶ್ವಾ ಆಡಳಿತ ಯಂತ್ರವನ್ನು ಪ್ರಯೋಗಿಸಿ ಕ್ರಾಂತಿಕಾರೀ ಬದಲಾವಣೆಗಳನ್ನು ಮಾಡಲು ಪ್ರಯತ್ನಿಸುವಾಗ ಸ್ವಾಭಾವಿಕವಾಗಿಯೇ ಸಂಭವಿಸುವ ತಪ್ಪುಗಳಾಗಿದ್ದುವು. ಲೆನಿನ್ನರ "ಪ್ರಭುತ್ವ ಮತ್ತು ಕ್ರಾಂತಿ" ಎಂಬ ಗ್ರಂಥದ ಪಾಠಗಳನ್ನು ನಾವು ಮರೆತಿರಲಿಲ್ಲ, ಆದರೆ ಭಾರತದಲ್ಲಿ ನಿಜವಾದ ಪ್ರಭುತ್ವಶಕ್ತಿ ಇರುವುದು ರಾಜ್ಯದಲ್ಲಲ್ಲ, ಕೇಂದ್ರದಲ್ಲಿ. ಆದುದರಿಂದ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದೆಂದರೆ ಕ್ರಾಂತಿಕಾರಿ ಹೋರಾಟದಲ್ಲಿ ಒಂದು ಹೆಜ್ಜೆ ಮುಂದಿಡುವುದೆಂದು ಮಾತ್ರವೇ ತಿಳಿದುಕೊಳ್ಳಬೇಕು. ಇದು ಹೆಚ್ಚಿನ ಜನರಿಗೂ ನಮ್ಮ ಹಿತೈಷಿಗಳಿಗೂ ಅರ್ಥವಾಗಿದೆಯೆಂದು ನನಗನ್ನಿಸುವುದಿಲ್ಲ. ಒಂದು ಕ್ರಾಂತಿಕಾರಿ ಪಕ್ಷವು ಪಾರ್ಲಿಮೆಂಟರಿ ಕೆಲಸವನ್ನು ವಹಿಸಿಕೊಳ್ಳುವಾಗ ಅತ್ಯಗತ್ಯವಾಗಿ ಪಾಲಿಸಬೇಕಾದ ಸೂಕ್ಷ್ಮ ವಿಷಯಗಳಲ್ಲಾದ ಕೊರತೆಯಿಂದಾಗಿಯೂ ಹಲವು ತಪ್ಪುಗಳಾದವು. ಆದರೆ ಭಾರತದ ಪಾರ್ಲಿಮೆಂಟರಿ ಇತಿಹಾಸದ ಹನ್ನೆರಡು ವರ್ಷಗಳಲ್ಲಿ ಬೇರೆಲ್ಲೂ ಕಾಣದ ಪುರೋಗಾಮಿ ಕ್ರಮಗಳು ಕಮ್ಯೂನಿಸ್ಟ್ ಸರಕಾರದ ಪ್ರತಿಯೊಂದು ಚಟುವಟಿಕೆಯಲ್ಲೂ ಕಂಡು ಬರುತ್ತಿದ್ದವು. ಈ ಕ್ರಮಗಳು ದೇಶಾದ್ಯಂತ ದುಡಿಯುವ ಜನರಿಗೆ ಉತ್ತೇಜನ ನೀಡುತ್ತಿದ್ದವು. ಈ ಕಾರ್ಯಕ್ರಮಗಳ ಫಲವನ್ನು ದೀರ್ಘಕಾಲದ ಪರಿಣಾಮಗಳನ್ನೂ ಭಾರತದ ಬಂಡವಾಳಶಾಹಿಗಳು ಸ್ಪಷ್ಟವಾಗಿ ಅರ್ಥ ಮಾಡಿಕೊಂಡರು.

ದೇಶದ ಪ್ರಜಾಪ್ರಭುತ್ವವಾದಿಗಳು ಕೇಂದ್ರದ ಸರ್ವಾಧಿಕಾರೀ ಕ್ರಮವನ್ನು ವಿರೋಧಿಸುತ್ತಿದ್ದರು. ಆದರೆ ಬಂಡವಾಳಶಾಹಿಗಳು ತಮ್ಮ ಅಧಿಕಾರ ತಪ್ಪಿಹೋಗುವುದನ್ನು ಸಹಿಸುವುದಿಲ್ಲವೆಂದೂ ದುಡಿಯುವ ವರ್ಗದ ಸರಕಾರವೊಂದನ್ನು ಉರುಳಿಸುವುದು ಅವರ ಉಳಿವಿನ ಪ್ರಶ್ನೆಯೇ ಆಗಿದೆಯೆಂದೂ ಭಾರತದ ಕಾರ್ಮಿಕ ವರ್ಗಕ್ಕೂ ಇತರ ದುಡಿಯುವ ಜನರಿಗೂ ತಿಳಿಯಪಡಿಸಿ, ಅವರು ತಮ್ಮ ಸರಕಾರವನ್ನು ರಕ್ಷಿಸುವಂತೆ ಮಾಡಲು ಈ ಪ್ರಜಾಪ್ರಭುತ್ವವಾದಿಗಳಿಗೆ ಸಾಧ್ಯವಾಗಲಿಲ್ಲ.

ಇಲ್ಲಿ ಮತ್ತೆ ನಾವು, ಮತ್ತು ಪಕ್ಷ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಎಲ್ಲಾ ಎಡ ಶಕ್ತಿಗಳನ್ನು ಒಗ್ಗೂಡಿಸುವುದಕ್ಕಾಗಿ ಶ್ರಮಿಸಿದ್ದನ್ನು ಕಾಣಬಹುದು. ಕಾಂಗ್ರೆಸ್ ಕೂಡ ಎಡ ಶಕ್ತಿಗಳನ್ನೊಡೆಯಲು ಅದೇ ತಂತ್ರ ಉಪಯೋಗಿಸಿದ್ದನ್ನು ನಾವು ಕಾಣುತ್ತೇವೆ. ಎಡರಂಗ ಸರ್ಕಾರದ ವಿರುದ್ಧ ಸಾಮಾಜಿಕ ಚಳುವಳಿಗೆ ಇಳಿದು, ತಕ್ಷಣವೇ ಸರ್ವಾಧಿಕಾರಿ ಗದಾಪ್ರಹಾರದಿಂದ ಜನಪ್ರಿಯ ಸರ್ಕಾರವನ್ನುರುಳಿಸಿದ್ದನ್ನೂ ಕೂಡ ಕಾಣುತ್ತೇವೆ. ಭೂ ಮಾಲಕರ ಮತ್ತು ಬಂಡವಾಳ ಶಾಹಿ ಹಿತಗಳನ್ನು ರಕ್ಷಿಸಲು ಕಾಂಗ್ರೆಸ್ ಈ ಪ್ರಯತ್ನಕ್ಕೆ ಕೈ ಹಾಕಿತು.

1960 ಮತ್ತು 67 ರ ಮಧ್ಯೆ ಪಕ್ಷ ಅನೇಕ ಸಾಮೂಹಿಕ ಹೋರಾಟಗಳನ್ನು ನಡೆಸಿತು. ಈ ಮೂಲಕ ವಿವಿಧ ರಾಜಕೀಯ ಶಕ್ತಿಗಳ ವ್ಯೂಹನನ್ನು ಮತ್ತೆ ಬದಲಾಯಿಸಿದ್ದು 1967 ರಲ್ಲಿ ಸಂಯುಕ್ತ ರಂಗದ ಮಹಾ ವಿಜಯದಲ್ಲಿ ಕೊನೆಮುಟ್ಟಿತು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ 9 ಸದಸ್ಯ ಬಲದ ಅಲ್ಪಸಂಖ್ಯಾ ಪಕ್ಷವಾಯಿತು.

1967 ರ ಪರಿಸ್ಥಿತಿಯನ್ನು ವಿವರಿಸುವ ಮೊದಲು ಎ.ಕೆ.ಜಿ. ಯವರು ನಾಯಕತ್ವ ವಹಿಸಿದ ಅಮರಾವತಿ ಸತ್ಯಾಗ್ರಹವನ್ನು ಪರಿಶೀಲಿಸಿದರೆ ರಾಜಕೀಯ ಶಕ್ತಿಗಳ ಸಮೀಕರಣದಲ್ಲಿ ಆದ ಬದಲಾವಣೆ ಏನು ಎಂಬುದನ್ನು ತಿಳಿಯಬಹುದು. ಎ.ಕೆ.ಜಿ. ಯವರಾಗಲಿ ಅವರ ಪಕ್ಷವಾಗಲೀ ಶೋಷಿತ ಜನಸಮೂಹದ ಹಿತಗಳನ್ನು ರಕ್ಷಿಸುವಲ್ಲಿ ಯಾವುದೇ ಸಂಕೋಚಕ್ಕೆ ಒಳಗಾಗುತ್ತಿರಲಿಲ್ಲ ಎಂಬುದೂ ಕೂಡ ಇಲ್ಲಿ ಸ್ಪಷ್ಟವಾಗುತ್ತದೆ.

ಅಮರಾವತಿ ಸತ್ಯಾಗ್ರಹ

"ನನ್ನ ಜೀವನದಲ್ಲಿ ಅಮರಾವತಿಯಲ್ಲಿ ಕಳೆದ ಹತ್ತು ದಿನಗಳು ಮರೆಯಲಾರದ ದಿನಗಳು."

1960 ರಲ್ಲಿ ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸಿ ಬಂದ ಕಾಂಗ್ರೆಸ್, ಪಿ.ಎಸ್.ಪಿ. ಮುಸ್ಲಿಂ ಲೀಗ್ ಸರಕಾರ ಎತ್ತರದ ಗಿರಿ ಶಿಖರಗಳಿಂದ ಅನೇಕ ಬಡ ರೈತ ಕುಟುಂಬಗಳನ್ನು ಓಡಿಸಿತು. ಎ.ಕೆ.ಜಿ. ಯವರ ಅಂದಾಜಿನ ಪ್ರಕಾರ ಹೊರದೂಡಲ್ಪಟ್ಟವರು ಒಂದೇ ತಾಲ್ಲೂಕಿನಲ್ಲಿ. 10,000 ಜನರನ್ನುಳ್ಳ 1700 ಕುಟುಂಬಗಳು.

ಉದುಂಬಂಚೋಲದಿಂದ ಹೊರದೂಡಲ್ಪಟ್ಟ ರೈತರು ಅಮರಾವತಿಯಲ್ಲಿ ನೆಲೆಸಿದರು. ಈ ಜನ ಸರ್ಕಾರಿ ಭೂಮಿಯನ್ನಾಕ್ರಮಿಸಿ ಅದನ್ನು "ಅಗ್ಗದ" ಬೆಲೆಯಲ್ಲಿ ಮಾರುತ್ತಿದ್ದ ಶ್ರೀಮಂತ ರೈತರ ಕುಟುಂಬದ ಭೂಮಿಯನ್ನು ಕೊಂಡರು. ಈ ಬಡರೈತರಿಗೆ ಕಮ್ಯೂನಿಸ್ಟ್ ಸರ್ಕಾರ ಒಡೆತನದ ಹಕ್ಕನ್ನು ನೀಡುತ್ತೇವೆಂದು ಘೋಷಿಸಿತು. ಈ ತೀರ್ಮಾನವನ್ನು ಕಾರ್ಯರೂಪಿಸುವ ಮೊದಲೇ ಸರ್ಕಾರವನ್ನು ವಜಾ ಮಾಡಲಾಗಿತ್ತು. ಈ ಬಡರೈತರಲ್ಲಿ ಬಹು ಭಾಗ ಕಮ್ಯೂನಿಸ್ಟ್ ವಿರೋಧಿಗಳ ಹಿಡಿತದಲ್ಲಿದ್ದರು. ಈ ರೈತರ ಒಬ್ಬ ನಾಯಕ ಫಾದರ್ ವಡಕ್ಕನ್ "ವಿಮೋಚನಾ ಹೋರಾಟ" ಸಮಯದಲ್ಲಿ ಕಮ್ಯೂನಿಸ್ಟ್ ಮಂತ್ರಿಮಂಡಲವನ್ನುರುಳಿಸುವುದರಲ್ಲಿ ತನ್ನ ಎಲ್ಲಾ ಹಿಂಬಾಲಕರನ್ನು ತೊಡಗಿಸಿದ್ದವರು.

ಆದರೆ ಅವರ ಹಿಂಬಾಲಕರೆಲ್ಲರನ್ನೂ ಅವರ ಭೂಮಿಯಿಂದ ಕರುಣೆಯಿಲ್ಲದೆ ಹೊರದೂಡಲ್ಪಟ್ಟಾಗ ಫಾದರ್ ವದಕ್ಕನ್‌ರವರಿಗೆ ಅವರ ಜೀವನದ ಅತಿ ದೊಡ್ಡ ಆಘಾತ ಎರಗಿಂದಂತಾಯಿತು.

ಈ ಬಡರೈತರನ್ನು ಪುನರ್ವಸತಿಗೊಳಿಸಬೇಕೆಂದು ಒತ್ತಾಯಿಸಿ ಎ.ಕೆ.ಜಿ. ಕೈಗೊಂಡ ಉಪವಾಸದ 11ನೆಯ ದಿನ ಪ್ರಜ್ಞಾರಹಿತರಾದರು. ಆದರೆ ಯಾರಿಗಾಗಿ ತಮ್ಮ ಜೀವವನ್ನೇ ಒತ್ತೆಯಿಟ್ಟರೋ ಅವರು ತಮ್ಮ ಪಕ್ಷದ ಕಟುವೈರಿಗಳೆಂಬುದು ಅವರ ಗಣನೆಗೇ ಬರಲಿಲ್ಲ. ಈ ಪ್ರಸಂಗ ಫಾದರ್ ವದಕ್ಕನ್‌ರವರ ಮೇಲೆ ಮರೆಯಲಾರದ ಪರಿಣಾಮ ಬೀರಿತು. ಮುಂದಿನ ವರ್ಷಗಳಲ್ಲಿ ಅವರು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನಿಷ್ಠಾವಂತ ಬೆಂಬಲಿಗರಾಗುಳಿದರು. ಮುಂದೆ ಭೂ ಸುಧಾರಣೆಗಳಿಗಾಗಿ ಬೆಂಬಲಿತ ಬೆಲೆಗಳಿಗೆ ನಡೆದ ಹೋರಾಟದಲ್ಲಿ ಎ.ಕೆ.ಜಿ. ಯವರ ಜೊತೆಯಲ್ಲಿಯೇ ಮುಖ್ಯ ಪಾತ್ರ ವಹಿಸಿದರು.

ಎ.ಕೆ.ಜಿ. ಯವರ ನಿಧನದ ಸ್ಮರಣಾಂಜಲಿಯಲ್ಲಿ "ಅಮರಾವತಿ ಸತ್ಯಾಗ್ರಹ" ದ ಸಮಯದಲ್ಲಿ ಎ.ಕೆ.ಜಿ. ಯವರಲ್ಲಿ ನಾನು ಕ್ರಿಸ್ತನನ್ನೇ ಕಂಡೆ ಎಂದರು. ಇಲ್ಲಿ ಅವರ ಮೇಲೆ ಎ.ಕೆ.ಜಿ. ಬೀರಿದ ಪ್ರಭಾವವನ್ನು ಗಮನಿಸಬಹುದು.

ಎ.ಕೆ.ಜಿ. ಯವರದೇ ಮಾತುಗಳಲ್ಲಿ ಅಮರಾವತಿಯ ನೆನಪುಗಳನ್ನು ಕಾಣಬಹುದು.

"ಮೇ 2ರಂದು ಪೋಲೀಸರು ಗುಡಿಸಲುಗಳನ್ನು ಮುರಿದು ಹಾಕಲಾರಭಿಸಿದರು. ಗುಡಿಸಲುಗಳನ್ನು ಸುಮ್ಮನೆ ಕಿತ್ತೆಸೆದರೆ ಪ್ರಯೋಜನವಿಲ್ಲವೆಂದು ಭಾವಿಸಿದ ಪೋಲೀಸರು ಅವುಗಳಿಗೆ ಬೆಂಕಿ ಹಚ್ಚಲಾರಂಭಿಸಿದರು. ದಿನವೊಂದರ ಸರಾಸರಿ 100 ಮನೆಗಳನ್ನು ಹೊತ್ತಿಸುವುದು ಅವರ ಕಾರ್ಯಕ್ರಮವಾಗಿತ್ತು. ಕಣ್ಣಿಗೆ ಕಾಣುವಷ್ಟು ದೂರದವರೆಗೂ ಇದ್ದ ಭತ್ತದ ಬೆಳೆಗಳು, ಮರಗೆಣಸಿನ ತೋಟಗಳು, ಸಾವಿರಗಟ್ಟಲೆ ನೇಂದ್ರಬಾಳೆ ಗಿಡಗಳು, ಇವೆಲ್ಲವನ್ನೂ ಪೋಲೀಸರು ನಾಶ ಮಾಡಿದರು. ತಮ್ಮ ಬೆವರು ಮತ್ತು ರಕ್ತದಿಂದ ಬೆಳೆಸಿದ, ಮತ್ತು ತಮ್ಮ ಬದುಕಿನ ಸರ್ವಸ್ವವೂ ಆದ ಇವುಗಳು ತಮ್ಮ ಕಣ್ಣೆದುರಿಗೇ ನಾಶವಾಗುತ್ತಿರುವುದನ್ನು ಕಂಡ ರೈತನ ಮನಸ್ಸಿನ ಸ್ಥಿತಿಯನ್ನು ಮನುಷ್ಯತ್ವವಿರುವ ಯಾರಾದರೂ ಊಹಿಸಬಲ್ಲರು.

> ಮಾರ್ಚ್ 22 ರಂದು ಕಾ. ಎ. ಕೆ ಗೋಪಾಲನ್‌ರವರ ಸ್ಮರಣ ದಿನಾಚರಣೆಯ ಸಂಧರ್ಭದಲ್ಲಿ ಬೆಂಗಳೂರಿನಲ್ಲಿ "ಎ ಕೆ. ಜಿ ಸಾರ್ಮಕ ಗ್ರಂಥಾಲಯ ಮತ್ತು ಉಚಿತ ವಾಚನಾಲಯ' ದ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ "ಎ.ಕೆ.ಜಿ ಮತ್ತು ಎಡ-ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಯ ಪರಿಕಲ್ಪನೆ" ಎಂಬ ವಿಷಯದ ಕುರಿತು ನಡೆದ ವಿಚಾರ ಗೋಷ್ಠಿಯಲ್ಲಿ, ಸಿ ಪಿ ಐ (ಎಂ) ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾ. ವಿ. ಜೆ. ಕೆ. ನಾಯರ್ ಅವರು ಮಂಡಿಸಿದ ವಿಚಾರಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

ಎ.ಕೆ.ಜಿ. ಯವರು ಭೇಟಿಕೊಟ್ಟಾಗ ಹೊರಕಾಲ್ಪಟ್ಟ ರೈತರು ಪ್ರಕೃತಿಯ ಹೊಡೆತಗಳನ್ನು ಎದುರಿಸುತ್ತಾ ಅತಿ ಹೀನ ಸ್ಥಿತಿಯಲ್ಲಿ ನರಳುತ್ತಿದ್ದರು. ಆಗ ಅವರು ಹೇಳುತ್ತಾರೆ.

ಹೃದಯವಿರುವ ಯಾವ ವ್ಯಕ್ತಿಗೂ ಅಲ್ಲಿ ಕಣ್ಣೀರು ತಡೆದುಕೊಳ್ಳಲು ಸಾಧ್ಯವಿರಲಿಲ್ಲ. ಇದು ಮನುಷ್ಯತ್ವಕ್ಕೆ ಒಂದು ಸವಾಲೆಂದು ನಾನು ಪರಿಗಣಿಸಿದೆ."

ನೀರಾವರಿ ಯೋಜನೆಗಳಿಗಾಗಿ 50 ಕೋಟಿ ರೂಪಾಯಿಗಳನ್ನು ಹಾಕುವಾಗ ಅದರಿಂದ ತೊಂದರೆಗೊಳಗಾದ ಜನರ ಪುನರ್ವಸತಿಗೆ 50 ಲಕ್ಷ ರೂಪಾಯಿಯಾದರೂ ವೆಚ್ಚ ಮಾಡುವುದು ಬೇಡವೇ. ಈ ಯೋಜನೆಯಿಂದ ಸಾವಿರಾರು ಕುಟುಂಬಗಳ ಬದುಕೇ ಭಗ್ನಗೊಂಡರೆ ಯೋಜನೆ ಯಾವುದಕ್ಕಾಗಿ ?

ಕಮ್ಯೂನಿಸ್ಟರಿಗೆ ಕಲ್ಲೇಟು ಕೊಡಬೇಕೆಂದು ನಂಬಿದ ಕಮ್ಯೂನಿಸ್ಟ್ ವಿರೋಧಿಗಳೂ ಯಾವ ವಿಷಯದಲ್ಲೇ ಆದರೂ ಕಮ್ಯೂನಿಸ್ಟರೊಂದಿಗೆ ಸಹಕರಿಸಬಾರದೆಂದು ನಂಬಿದವರೂ ಆ ಗುಂಪಿನಲ್ಲಿದ್ದಾರೆ.... ಅಮರಾವತಿಯ ಶೆಡ್ಡುಗಳು ಇಂತಹ ಮನೋಭಾವಗಳನ್ನು ಪುಡಿಗುಟ್ಟಿದವು. ಕಾಂಗ್ರೆಸ್ಸಿಗನೂ ಕಮ್ಯೂನಿಸ್ಟ್ ವಿರೋಧಿಯೂ ಆ ಶೆಡ್ಡಿನಲ್ಲಿ ಒಂದೇ ಹರಕು ಚಾಪೆಯಲ್ಲಿ ಹತ್ತಿರ ಹತ್ತಿರ ಮಲಗಿ ನಿದ್ರಿಸುತ್ತಾರೆ. ಕ್ರೈಸ್ತನೂ ನಾಯರೂ ಈಳವನೂ ಒಟ್ಟಿಗೇ ಅಡಿಗೆ ಮಾಡಿ ಒಟ್ಟಿಗೇ ಉಣ್ಣುತ್ತಿದ್ದಾರೆ. ಅವರು ನನ್ನನ್ನು ಒಬ್ಬ ಕಮ್ಯೂನಿಸ್ಟನಾಗಿ ಮಾತ್ರವೇ ಪರಿಗಣಿಸಲಿಲ್ಲ. ಅವರಿಗೆ ನನ್ನ ರಾಜಕೀಯವಾಗಲೀ ಜಾತಿಯಾಗಲಿ ಮುಖ್ಯವಲ್ಲ.

ಅಮರಾವತಿ ಸತ್ಯಾಗ್ರಹದ ನಂತರದಲ್ಲಿಯೇ ಕೇರಳದ ತುಂಬ ಸಾಮೂಹಿಕ ಹೋರಾಟಗಳು ಪ್ರಾರಂಭವಾದುವು. ಎ.ಕೆ.ಜಿ. ಇತರ ರೈತ ನಾಯಕರೊಡನೆ 426 ಮೈಲಿಯುದ್ದದ, 26 ದಿನಗಳ ಪ್ರಸಿದ್ಧ ಜಾಥಾದಲ್ಲಿ ನಡೆದರು. ಇದು ಫಾದರ್ ವದಕ್ಕನ್ ಮಲತ್ತು ವೆಲಿಂಗ್‌ಟನ್ ಮತ್ತು ಸಂಯುಕ್ತ ಸಮಾಜವಾದಿ ಪಕ್ಷದ ರೈತ ಸಂಘವೂ ಸೇರಿದಂತೆ ಒಂದು ಐಕ್ಯ ರೈತ ಸಂಘವೂ ಸೇರಿದಂತೆ ಒಂದು ಐಕ್ಯ ರೈತ ಸಮ್ಮೇಳನಕ್ಕೆ ನಾಂದಿಯಾಯಿತು.

ಸಿ.ಪಿ.ಐ. (ಎಂ) ಉದಯ 1964

ಈ ಅವಧಿಯ ಬಗ್ಗೆ ಎ.ಕೆ.ಜಿ. ಯವರು ವ್ಯಕ್ತ ಪಡಿಸಿದ ಕೆಲವು ಅಭಿಪ್ರಾಯವನ್ನು ಗಮನಿಸಿದರೆ ಸಾಕು. ಪಕ್ಷದ ಒಡಕಿನ ಕಾರಣವನ್ನು ಕೆದಕುವುದು ನಮ್ಮ ಉದ್ದೇಶವಲ್ಲ.

ಜನ ವಿರೋಧಿ ಕಾಂಗ್ರೆಸ್ ವಿರುದ್ಧ ಜನರ ಹೋರಾಟಗಳಿಗೆ ನಾಯಕತ್ವ ನೀಡಿದ್ದಕ್ಕೆ, ಜನಪರ ಕಾಂಗ್ರೆಸ್ ವಿರೋಧಿ ಧೋರಣೆಗಾಗಿ ಅವಿರತವಾಗಿ ಹೋರಾಡಿದ್ದಕ್ಕಾಗಿ, ಬೂರ್ಶ್ವಾ ರಾಷ್ಟ್ರೀಯ ಭಾವನೆಗಳನ್ನು ಹೊಡೆದೆಬ್ಬಿಸಿ, ಅವರನ್ನು ಚೀನಾದ ಗುಪ್ತಚಾರನೆಂದು ದೂಷಿಸಲಾಯಿತು. ದುಡಿಮವರ ಪಕ್ಷವನ್ನು ಕಾಂಗ್ರೆಸ್ ಜೊತೆಯ ಸಹಚಾರನಾಗುವುದಕ್ಕಾಗಿ ಅಂದಿನ ನಾಯಕತ್ವದ ಮುಖ್ಯ ಭಾಗ ಕಾರಣವಾಯಿತು.

ಈ ಬಗ್ಗೆ ಎ.ಕೆ.ಜಿ. ಯವರ ಅಭಿಪ್ರಾಯಗಳು :

1952 ರಲ್ಲಿ ನಡೆದ ಚುನಾವಣೆಯಲ್ಲೂ ಪಾರ್ಲಿಮೆಂಟರೀ ಚಟುವಟಿಕೆಗಳಲ್ಲೂ ಒಂದು ಕ್ರಾಂತಿಕಾರೀ ಪಕ್ಷಕ್ಕೆ ಅಗತ್ಯವಿದ್ದ ಎಚ್ಚರಿಕೆಗಳನ್ನು ಕೈಗೊಳ್ಳಲು ವಿಫಲವಾದುದೇ ಪಾರ್ಟಿ ದುರ್ಬಲವಾಗಲು ಮುಖ್ಯಕಾರಣವಾಗಿತ್ತು. ಇಡೀ ಪಾರ್ಟಿ ಸಂಘಟನೆಯನ್ನು ಚುನಾವಣಾಯಂತ್ರವಾಗಿ ಪರಿವರ್ತಿಸಲಾಯಿತು. ಪಂಚಾಯತಿಯಿಂದ ಪಾರ್ಲಿಮೆಂಟ್ ವರೆಗಿನ ಚುನಾವಣೆಗಳು ಒಂದರ ಹಿಂದೆ ಒಂದರಂತೆ ಬರತೊಡಗಿದವು. ಓಟು ಗಳಿಸುವ ಉದ್ದೇಶದಿಂದ ಸಂದರ್ಭಸಾಧಕ ಧೋರಣೆಗಳನ್ನು ಅನುಸರಿಸಲಾಯಿತು. ಧೋರಣೆಗಳ ಮತ್ತು ಕಾರ್ಯಕ್ರಮಗಳ ಆಧಾರದಲ್ಲಿ ಒಂದು ಸುಸಂಘಟಿತವಾದ ಪಾರ್ಟಿಯನ್ನು ಕಟ್ಟಿ ಬೆಳೆಸಲು ಸಾಧ್ಯವಾಗಲಿಲ್ಲ. ಬಹುಮತ ಗಳಿಸುವ ಉದ್ದೇಶದಿಂದ ಒಕ್ಕೂಟಗಳನ್ನೂ ಮೈತ್ರಿಗಳನ್ನೂ ಬೆಳೆಸಲಾಯಿತು.

ಪಾರ್ಟಿಯಲ್ಲಿ ಕೆಲವರು ಅಧಿಕಾರ ವ್ಯಾಮೋಹಕ್ಕೂ ಬಲಿಯಾದರು. ಪಾರ್ಲಿಮೆಂಟು, ಅಸೆಂಬ್ಲಿ ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರು ಒಂದು ಪ್ರತ್ಯೇಕ ವರ್ಗವಾಗಿ ಪರಿವರ್ತನೆ ಹೊಂದಿದರು. ಸ್ವಂತ ಆಸ್ತಿಯನ್ನೂ ಸುಖಸೌಕರ್ಯಗಳನ್ನೂ ಭೋಗಜೀವನವನ್ನೂ ಗಳಿಸುವ ಆಗ್ರಹವು ಪಾರ್ಟಿ ಸದಸ್ಯರಲ್ಲಿ ಕಂಡು ಬಂದಿತು.

(7ನೇ ಪುಟ ನೋಡಿ)

ಪೌರ ಕಾರ್ಮಿಕರ ಬೇಡಿಕೆ ದಿನಾಚರಣೆ

ಕರ್ನಾಟಕ ರಾಜ್ಯ ನಗರಸಭೆಗಳ ನೌಕರರ ಮತ್ತು ಪೌರ ಕಾರ್ಮಿಕರ ಒಕ್ಕೂಟ ತಮ್ಮ 16 ಬೇಡಿಕೆಗಳ ಸಲುವಾಗಿ ಮಾರ್ಚ್ 24 ರಂದು ಮತ ಪ್ರದರ್ಶನ ಸಭೆಗಳ ಮೂಲಕ ಬೇಡಿಕೆ ದಿನಾಚರಣೆ ಆಚರಿಸಬೇಕೆಂದು ಕರೆ ನೀಡಿತ್ತು. ಆರ್ಥಿಕ ಮುಗ್ಗಟ್ಟಿನಿಂದಾಗಿ ಬಹಳಷ್ಟು ನಗರಸಭೆಗಳಲ್ಲಿ 3-4 ತಿಂಗಳು ಸಂಬಳ ಸಿಗುತ್ತಿಲ್ಲ. ಜೀವನ ನಡೆಸುವುದೇ ಅಸಾಧ್ಯವಾಗಿದೆ. ಸರಕಾರದಿಂದ ಸರಿಯಾಗಿ ಧನ ಸಹಾಯ ಸಿಗುತ್ತಿಲ್ಲ. ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರದಾರರಿಗೆ ಬಡ್ತಿ ಸಿಗುತ್ತಿಲ್ಲ, ಬೇರೆ ಖಾತೆಗಳಿಂದ ಇಂಜಿನಿಯರ್, ಸ್ಯಾನಿಟರಿ ಇನ್‌ಸ್ಪೆಕ್ಟರಗಳನ್ನು ಎರವಲಾಗಿ ನೇಮಿಸಲಾಗುತ್ತಿದೆ. ಇಷ್ಟು ವರ್ಷವಾದರೂ ಜ್ಯೇಷ್ಠತಾಯಾದಿ, ಕೇಡರ ನಿಯಮಗಳಿಲ್ಲ.

ಸರಕಾರದ ಖಜಾನೆಯಿಂದಲೇ ನಗರಸಭೆಗಳ ನೌಕರರಿಗೆ ಪೌರ ಕಾರ್ಮಿಕರಿಗೆ ಸಂಬಳ ಬಟವಡೆಯಾಗಬೇಕು; ಪ್ರತ್ಯೇಕ ನಿರ್ದೇಶನಾಲಯ ರಚನೆಯಾಗಬೇಕು, ಸರಕಾರದ ಎರವಲು ಅಧಿಕಾರಿಗಳನ್ನು ಹಿಂತೆಗೆದುಕೊಳ್ಳಬೇಕೆಂಬ 16 ಬೇಡಿಕೆಗಳಿಗಾಗಿ ಹೋರಾಟ ನಡೆಸಬೇಕೆಂದು ಕಾರ್ಯಕಾರಿ ಸಮಿತಿ ನಿರ್ಣಯಿಸಿತ್ತು. ದಿನಾಚರಣೆಯ ಕುರಿತು ವರದಿಗಳನ್ನು ಪ್ರಕಟಿಸುತ್ತಿದ್ದೇವೆ.

ಬಿಜಾಪುರ

ಒಕ್ಕೂಟದ ಕರೆಯ ಮೇರೆಗೆ ಬಿಜಾಪುರ ನಗರ ಸಭೆಯ ನೌಕರರೂ, ಪೌರ ಕಾರ್ಮಿಕರೂ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಮತ ಪ್ರದರ್ಶನ ಮಾಡಿ ಬೇಡಿಕೆಗಳ ಮನವಿಯನ್ನರ್ಪಿಸಿದರು. ವಿ.ಎಂ. ಸೊನ್ನದ ಕಾರ್ಮಿಕರನ್ನುದ್ದೇಶಿಸಿ ಭಾಷಣದಲ್ಲಿ ಬೇಡಿಕೆಗಳನ್ನ ಸರಕಾರ ಶೀಘ್ರ ಈಡೇರಿಸದಿದ್ದರೆ ಹೋರಾಟ ಮಾಡಬೇಕಾದೀತೆಂದೂ ಹೇಳಿದರು. ಹಾಗೆಯೇ ಬಿಜಾಪುರ ನಗರದ ವಾರ್ಡ 6 ರಲ್ಲಿ 14 ಹರಿಜನರಿಗೆ ಮನೆಕಟ್ಟಿಸಿಕೊಡಬೇಕೆಂದೂ ಒತ್ತಾಯಿಸಿದರು. ಈ ಮೆರವಣಿಗೆಯಲ್ಲಿ ರೈತ ಸಂಘದ ಎಕ್ತಿಯಾರ ಸಾಬ್, ಎಸ್.ಎಫ್.ಐ.ಯ ಬೆಳ್ಳುಭಿ ಮತ್ತು ನರೇಗಲ್ ಪಾಲ್ಗೊಂಡಿದ್ದರು.

ಬಾಗಲಕೋಟೆ

ನಗರಸಭೆ ನೌಕರರ ಒಕ್ಕೂಟದ ಆದೇಶದ ಮೇರೆಗೆ ಬಾಗಲಕೋಟೆ ನಗರ ಸಭೆಯ ಪೌರ ಕಾರ್ಮಿಕರೂ, ನೌಕರದಾರರೂ ಮೆರವಣಿಗೆ ಮೂಲಕ ಅಸಿಸ್ಟೆಂಟ್ ಕಮಿಶನರಿಗೆ ಮನವಿ ಪತ್ರ ಸಲ್ಲಿಸಿದರು. ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಎಂ. ಖಲಾಸಿಯವರು ಬೇಡಿಕೆಗಳ ಕುರಿತು ವಿವರಣೆ ನೀಡಿ ಭಾಷಣ ಮಾಡಿದರು.

ಮೈಸೂರು

ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಮೈಸೂರಿನ ಮಹಾನಗರ ಪಾಲಿಕೆಯ ಪೌರ ಕಾರ್ಮಿಕರು ಒಂದುವಾರ ಸತ್ಯಾಗ್ರಹ ನಡೆಸಿದ ಪ್ರತಿ ಫಲವಾಗಿ ದಿನಗೂಲಿ ಮೇಲೆ ಕೆಲಸ ಮಾಡುವವರನ್ನು ಕಾಯಂಗೊಳಿಸಲು, ಸೇವಾ ಅವಧಿಯಲ್ಲಿ ಮೃತಪಟ್ಟ ನೌಕರರ ವಾರಸುದಾರರಿಗೆ ನೌಕರಿ ಕೊಡಲು, 200 ಜನ ಪೌರ ಕಾರ್ಮಿಕರು ನಿವೃತ್ತರಾಗಿದ್ದು ಅಥವಾ ಮರಣ ಹೊಂದಿದ್ದು ಅವರ ಸ್ಥಾನದಲ್ಲಿ ಹೊಸಬರನ್ನ ನೇಮಿಸಿಕೊಳ್ಳುವ ಕುರಿತು ಹೊಸ ಬಜೆಟ್ಟಿನಲ್ಲಿ ಹಣದ ವ್ಯವಸ್ಥೆ ಮಾಡಿ, ಸರಕಾರದ ಮಂಜೂರಾತಿ ಪಡೆದು ಕ್ರಮ ಕೈಗೊಳ್ಳಲು, ಒಂದು ನೂರು ಮನೆಗಳನ್ನು ಪೌರ ಕಾರ್ಮಿಕರ ಪರವಾಗಿ ಕಟ್ಟಿಕೊಡಲು, 12 ವರ್ಷ ಸೇವೆ ಸಲ್ಲಿಸಿದವರಿಗೆ ಒಂದು ಭಡ್ತಿ ನೀಡಲು, ಸಮವಸ್ತ್ರ ಕೊಡಲು ಮೇಯರ್ ಮತ್ತು ಆಯುಕ್ತರು ಒಪ್ಪಿಕೊಂಡದ್ದರಿಂದ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಲಾಯಿತು. ಮೋಹನ್ ಕುಮಾರ್, ಸಿ. ಕೆ. ಮೋಸ್ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಪೌರ ಕಾರ್ಮಿಕರ ಒಕ್ಕೂಟದ ಆದೇಶದ ಮೇರೆಗೆ, ಮಾರ್ಚ್ 24 ರಂದು ಉಪಾಧ್ಯಕ್ಷರಾದ ಚಿಕ್ಕಮಾರಯ್ಯನವರ ಅಧ್ಯಕ್ಷತೆಯಲ್ಲಿ ಪೌರ ಕಾರ್ಮಿಕರ ಸಭೆ ಸೇರಿ ನೌಕರರ ಮತ್ತು ಪೌರ ಕಾರ್ಮಿಕರ ಬೇಡಿಕೆಗಳ ಕುರಿತು ಸಿ. ಕೆ. ಮೋಸ್ ಅವರು ಭಾಷಣ ಮಾಡಿದ ನಂತರ ಬೇಡಿಕೆಗಳ ಕುರಿತು ಮನವಿಯನ್ನು ನಗರ ಪಾಲಿಕೆಯ ಆಡಳಿತ ವರ್ಗದ ಮೂಲಕ ರಾಜ್ಯ ಸರಕಾರಕ್ಕೆ ಕಳುಹಿಸಿಕೊಡಲಾಯಿತು.

ಪುತ್ತೂರು

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಪೌರ ಕಾರ್ಮಿಕರು ರಾಜ್ಯದ ಒಕ್ಕೂಟದ ಕರೆಯ ಮೇರೆಗೆ ಮಾರ್ಚ್ 24 ರಂದು ಬೇಡಿಕೆ ದಿನಾಚರಣೆಯನ್ನು ಆಚರಿಸಿ, ರಾಜ್ಯ ಸರಕಾರಕ್ಕೆ ತಮ್ಮ ಮನವಿಯನ್ನು ಸಲ್ಲಿಸಿರುತ್ತಾರೆ. ಕಾ. ಬಿ. ರಾಮಕೃಷ್ಣ ಅವರು ಮುಖಂಡತ್ವ ವಹಿಸಿದ್ದರು.

ಬಂಟ್ವಾಳ

ಬಂಟ್ವಾಳದಲ್ಲಿ ವಾಸುಗಟ್ಟಿಯವರ ನೇತೃತ್ವದಲ್ಲಿ ಕಾರ್ಮಿಕರ ಸಹಿಯನ್ನೊಳಗೊಂಡ ಮನವಿ ಪತ್ರವನ್ನು ನಗರಸಭೆ ಮಂತ್ರಿಗಳಿಗೆ ಕಳುಹಿಸಿ ಕೊಡಲಾಗಿದೆ.

ತಿಪಟೂರು

ಒಕ್ಕೂಟದ ಕರೆಯ ಮೇರೆಗೆ ತಿಪಟೂರು ನಗರಸಭೆಯ ಪೌರ ಕಾರ್ಮಿಕರೂ, ನೌಕರದಾರರೂ ಮಾರ್ಚ್ 24 ರಂದು ಮೆರವಣಿಗೆ, ಮತ ಪ್ರದರ್ಶನ ನಡೆಸಿ ತಮ್ಮ ಬೇಡಿಕೆಗಳ ಮನವಿಯನ್ನು ಮಂತ್ರಿಯವರಿಗೆ ಕಳುಹಿಸಿದರು. ಕಾರ್ಮಿಕರ ಸಭೆಯಲ್ಲಿ ವಕೀಲರೂ ಕಾರ್ಮಿಕ ಮುಖಂಡರಾದ ಬಿ. ಡಿ. ರಾಮಯ್ಯನವರು ಭಾಷಣ ಮಾಡಿದರು. ಕಾ. ಬಾಲಯ್ಯನವರು ವಂದಿಸಿದರು.

ಬೈಲಹೊಂಗಲ, ಕುಮಟ, ದಾಂಡೇಲಿ, ಕುಣಿಗಲ್, ಕೆ.ಜಿ.ಎಫ್. ಮೊದಲಾದ ಕಡೆಗಳಲ್ಲೂ ದಿನಾಚರಣೆ ಆಚರಿಸಲಾಯಿತೆಂಬ ವರದಿ ಬಂದಿದೆ.

ಎಣ್ಣೆ ಕೆಲಸಗಾರರ ಸಂಘಟನೆ

ರಾಯಚೂರು ನಗರದಲ್ಲಿ ಇಪ್ಪತ್ತಕ್ಕೂ ಮೇಲ್ಪಟ್ಟು ಸಣ್ಣ ಎಣ್ಣೆ ಕಾರ್ಖಾನೆಗಳಿದ್ದು ಅವುಗಳಲ್ಲಿ ಸುಮಾರು ಒಂದು ಸಾವಿರ ಕಾರ್ಮಿಕರು ದುಡಿಯುತ್ತಿದ್ದಾರೆ. ಈ ಅಸಂಘಟಿತ ಕಾರ್ಮಿಕರನ್ನು ಸಿಐಟಿಯು ಸಂಘಟಿಸಿ ಹಲವಾರು ಹೋರಾಟಗಳನ್ನು ನಡೆಸುತ್ತಿದೆ. ಕಾರ್ಮಿಕರಲ್ಲಿ ಸುಲಿಗೆಯ ವಿರುದ್ಧ ಐಕ್ಯ ಹೋರಾಟ ನಡೆಸುವ ಮನೋಭಾವನೆಯನ್ನು ಉಂಟು ಮಾಡುತ್ತಿರುವುದು ಕಂಡು ಬರುತ್ತಿದೆ.

ಸ್ವಾತಂತ್ರ್ಯ ಪೂರ್ವದಿಂದಲೂ ಫರೂಕ್ ಅನ್ವರ ಕಂಪೆನಿ ಇಡೀ ಒಕ್ಕಲತನ ಹುಟ್ಟುವಳಿ ಮಾರುಕಟ್ಟೆಗೆ ಬರುವ ಎಲ್ಲ ಎಣ್ಣೆ ಕಾಳುಗಳ ಗುತ್ತಿಗೆ ವ್ಯಾಪಾರಿಯಾಗಿದೆ. ತನ್ನ ಕಾರ್ಖಾನೆಯಲ್ಲಿ ಬಡ ಜನರನ್ನು ದುಡಿಸಿ, ಶೋಷಣೆ ಮಾಡಿ, ಸಾಬೂನ್, ತಂಪು ಪಾನೀಯ ಪಿನ್ ಮುಂತಾದ ಉದ್ಯಮಗಳನ್ನು ಪ್ರಾರಂಭಿಸಿದ್ದಾರೆ.

ಕಾರ್ಮಿಕ ಕಾನೂನುಗಳನ್ನೆಲ್ಲ ಉಲ್ಲಂಘಿಸಿ 10 ರಿಂದ 12 ತಾಸು ಕಾರ್ಮಿಕರನ್ನು ದುಡಿಸಿ ರೂ 8-10 ದಿನಗೂಲಿ ಕೊಡುತ್ತಿದ್ದಾರೆ. ಊಟ ಬೇಗ ಮುಗಿಸದಿದ್ದರೆ, ಊಟದ ಬುತ್ತಿಯನ್ನೇ ಕಾಲಿನಿಂದ ಒದ್ದು ಅವಾಚ್ಯ ಶಬ್ದಗಳಿಂದ ಬೈದು ಹೊಡೆಯುವ ಪ್ರವೃತ್ತಿ ಬೆಳೆದು ಬಂದಿತ್ತು. ಕಾರ್ಮಿಕರಿಗೆ ರಜೆಯಾಗಲೀ, ಬಡ್ತಿಯಾಗಲೀ, ಮುಂಗಡ ಹಣವಾಗಲೀ ಸಿಗುತ್ತಿರಲಿಲ್ಲ. ಅವುಗಳನ್ನು ಕೇಳಿದರೆ ಮನೆಗಪ್ಪಣೆ ಆಗುತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ ಕಾರ್ಮಿಕರು ಕೆಂಬಾವುಟದ ನೇತೃತ್ವದಲ್ಲಿ ಸಂಘಟಿತರಾಗುತ್ತಿದ್ದಾರೆ. ಇದನ್ನು ಕಂಡ ಮಾಲಕರೂ, ಕಾಂಗ್ರೆಸ್ ಮುಖಂಡರೆಲ್ಲ ರಾತ್ರಿ ಕಾರ್ಮಿಕರ ಮನೆಗಳಿಗೆ ಹೋಗಿ ಸಿ.ಐ.ಟಿ.ಯು. ಯೂನಿಯನ್ ಬಿಡುವಂತೆ ಒತ್ತಾಯ ಮಾಡುತ್ತಿದ್ದರೂ ಕೂಡ ಕಾರ್ಮಿಕರು ಐಕ್ಯದಿಂದ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಪಡೆಯಲು ಸಿ.ಐ.ಟಿ.ಯು ನೇತೃತ್ವದಲ್ಲಿ ಹೋರಾಡಲು ನಿರ್ಧರಿಸಿದ್ದಾರೆ. ಕಾರ್ಮಿಕರ ಬೇಡಿಕೆಗಳ ಕುರಿತು ಚರ್ಚಿಸಲು ಲೇಬರ ಆಫೀಸರ್ ಕರೆದ ಸಭೆಗೆ ಮಾಲಕರು ಬರಲಿಲ್ಲ. ಕಾರ್ಮಿಕರು ಮುಷ್ಕರದ ನೋಟೀಸು ಕೊಟ್ಟು ಹೋರಾಟ ಕಣಕ್ಕಿಳಿದಿದ್ದಾರೆ.

ಸಾಲ್ವೆಂಟ್ ಕಾರ್ಮಿಕರ ಹೋರಾಟ

ಕಳೆದ ಹತ್ತು ವರ್ಷಗಳಿಂದ ಅತ್ಯಾಧುನಿಕ ತಂತ್ರಜ್ಞಾನ, ಮತ್ತು ಮೆಶಿನರಿಗಳನ್ನು ಹೊಂದಿರುವ ಅಕ್ಕಿಯ ತೌಡಿನಿಂದ ಎಣ್ಣೆ ಉತ್ಪಾದಿಸುವ ರಾಯಚೂರು ಸಾಲ್ವೆಂಟ್ ಕಾರ್ಖಾನೆ ತನ್ನಲ್ಲಿ ದುಡಿಯುತ್ತಿರುವ 120 ಕ್ಕೂ ಮೇಲ್ಪಟ್ಟಿರುವ ಕಾರ್ಮಿಕರನ್ನು ಗುಲಾಮರಂತೆ ದುಡಿಸುತ್ತಿದೆ, ಸುಲಿಯುತ್ತಿದೆ. ದಿನ ಒಂದಕ್ಕೆ ಒಂದೂವರೆ ಲಕ್ಷ ರೂಪಾಯಿ ಮೌಲ್ಯದ ಎಣ್ಣೆ ಉತ್ಪಾದಿಸುತ್ತಿದ್ದಾರೆ. ಇದರಿಂದ ಮಾಲಕರಿಗೆ ಪ್ರತಿ ದಿನ ಸಾವಿರಾರು ರೂಪಾಯಿ ಲಾಭ ಸಿಗುತ್ತದೆಂದು ಹೇಳಲಾಗುತ್ತಿದೆ. ಇಷ್ಟು ಲಾಭ ಗಳಿಸುವ ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರ ಪರಿಸ್ಥಿತಿ ಮಾತ್ರ ಚಿಂತಾಜನಕವಾಗಿರುತ್ತದೆ. ಅವರ ಕೆಲಸಕ್ಕೆ ಭದ್ರತೆಯಿಲ್ಲ, ಕ್ರಮಬದ್ಧ ವೇತನ ಶ್ರೇಣಿಯಲ್ಲಿ ತುಟ್ಟಿ ಭತ್ತೆ, ಮನೆ ಬಾಡಿಗೆಗಳಿಲ್ಲ, ಬೋನಸ್ ಕನಸಿನಲ್ಲೂ ಇಲ್ಲ ಹೀಗಾಗಿ ಹೆಚ್ಚಿನ ಶೋಷಣೆ ನಡೆದಿದೆ.

ಇಂಥ ಸಂಕಷ್ಟಗಳಿಂದ ಪರಿಹಾರ ಕಂಡು ಹಿಡಿಯುವ ಸಲುವಾಗಿ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಸಂಘ ಕಟ್ಟಿ ಹೋರಾಡುತ್ತಿದ್ದಾರೆ.

ಕೈಗಾರಿಕೆಯಲ್ಲಿ ಹಿಂದುಳಿದಿರುವ ರಾಯಚೂರಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಮೇಲ್ಗೈ ಇರುವುದರಿಂದ ಸಂಘಟಿತರಾಗುತ್ತಿರುವ ಕಾರ್ಮಿಕರನ್ನೂ, ಕೊಳಚೆ ಪ್ರದೇಶದ ಜನರನ್ನೂ ಸೈಕಲ್ ರಿಕ್ಷಾ, ಸಾಗೆ ನೌಕರರನ್ನೂ ಇಬ್ಭಾಗಿಸಿ ಸಂಘಟನೆ ಮುರಿಯುವ ಕುತಂತ್ರ ಕಳೆದ ಕೆಲವು ವರ್ಷಗಳಿಂದ ರಾಯಚೂರಿನಲ್ಲಿ ನಡೆಯುತ್ತಿದೆ. ಇಂಥ ಪ್ರತಿಗಾಮಿ ಶಕ್ತಿಗಳ ವಿರುದ್ಧ ಬಲಿಷ್ಟವಾದ ಜನಾಭಿಪ್ರಾಯ ಮೂಡಿಬರುವಂತೆ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೂ, ವಿದ್ಯಾರ್ಥಿ ಯುವಜನರನ್ನೂ ಸಂಘಟಿಸಿ ಕಾರ್ಮಿಕರ ಹಿತರಕ್ಷಣೆಗಾಗಿ ಜಂಟೀ ಹೋರಾಟಗಳನ್ನು ನಡೆಸುವುದ ಅತ್ಯಗತ್ಯ. ಸಿಐಟಿಯು ಮುಖಂಡತ್ವ ಬಹಳ ಮುತವರ್ಜಿಯಿಂದ ಕೆಲಸ ಮುಂದುವರಿಸಿ ಕಾರ್ಮಿಕರಿಗೆ ರಾಜಕೀಯ ಪ್ರಜ್ಞಾನ ಕೊಟ್ಟು ಹೋರಾಟ ಮುಂದುವರಿಸಬೇಕು.

ರೈತ ಸಂಘ ಉದ್ಘಾಟನೆ

ದಿನಾಂಕ. 22-3-84 ರಂದು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಳಕಟ್ಟಿ ಗ್ರಾಮದಲ್ಲಿ ರೈತ ಸಂಘದ ಉದ್ಘಾಟನೆ ನಡೆಯಿತು. ಕೃಷಿ ಹುಟ್ಟುವಳಿಗೆ ಲಾಭದಾಯಕ ಬೆಲೆ ಮತ್ತು ಕೃಷಿ ಕೂಲಿಕಾರರಿಗೆ ನ್ಯಾಯವಾದ ಕೂಲಿ ಇವು ಎರಡೂ ಒಂದೇ ಪ್ರಶ್ನೆಯ ಎರಡು ಮುಖಗಳು ಎಂದು ಸಭೆಗೆ ಆಗಮಿಸಿದ್ದ ಕಾ. ನಿತ್ಯಾನಂದಜಿ ಅವರು ಹೇಳಿದರು. ರೈತರನ್ನು ಮತ್ತು ಕೃಷಿ ಕೂಲಿಕಾರರನ್ನು ಪರಸ್ಪರ ಎತ್ತಿಕಟ್ಟುವ "ಹಸಿರು ರೈತ ಸಂಘದ" ಬಗ್ಗೆ ರೈತರಿಗೆ ಎಚ್ಚರಿಕೆ ಕೊಟ್ಟರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾ. ಎಸ್. ಎಚ್. ಕಪ್ಪಣ್ಣವರು ವಹಿಸಿದ್ದರು.

ನೂತನ ಘಟಕಕ್ಕೆ ಈ ಕೆಳಗಿನ ನಾಲ್ಕರು ಪದಾಧಿಕಾರಿಗಳು ಹಾಗೂ ಏಳು ಜನ ಸದಸ್ಯರಿರುವ ಒಂದು ಕಾರ್ಯಕಾರಿ ಸಮಿತಿ ಆಯ್ಕೆಯಾಯಿತು.

ಶ್ರೀ ದೂಳಪ್ಪ ಮೇಟಿ, ಅಧ್ಯಕ್ಷರು ಶ್ರೀ ಬಸನಗೌಡ ಗದ್ದಿಗೆಗೌಡ ಉಪಾಧ್ಯಕ್ಷ, ಶ್ರೀ ಮಹದೇವಪ್ಪ ಚುಳಕಿ ಕಾರ್ಯದರ್ಶಿ, ಶ್ರೀ ಮಲ್ಲಪ್ಪ ಕೆರೂರ್ ಸಹಕಾರ್ಯದರ್ಶಿ.

ಕಾಲುವೆ ತುದಿ ಪ್ರದೇಶದ ಈ ಗ್ರಾಮದ ರೈತರು ಸಮರ್ಪಕ ನೀರಾವರಿ ವ್ಯವಸ್ಥೆಗಾಗಿ ಹೋರಾಡಲು ನಿರ್ಧಾರ ಮಾಡಿದ್ದಾರೆ.

ಕೇರಳ ವಿಶ್ವವಿದ್ಯಾಲಯದಲ್ಲಿ ಎಸ್. ಎಫ್. ಐ. ಜಯಭೇರಿ

ಅತ್ಯಂತ ಹೆಚ್ಚು ಮತಗಳ ಅಂತರದಿಂದ ಪುನಃ ಕೇರಳ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದಲ್ಲಿ ಎಸ್. ಎಫ್. ಐ. ಜಯಗಳಿಸಿದೆ. ವಿ. ರಾಜೇಂದ್ರ ಬಾಬು ಮತ್ತು ಎನ್. ಶೌಕತ್ ಅಲಿ ಕ್ರಮವಾಗಿ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿಯ 15 ಸ್ಥಾನಗಳಲ್ಲಿ ಎಸ್‌ಎಫ್‌ಐ 9 ಸ್ಥಾನವನ್ನು ಗಳಿಸಿದೆ.

ಕಾಂಗ್ರೆಸ್ (ಐ)ನ ವಿದ್ಯಾರ್ಥಿ ವಿಭಾಗವಾದ ಕೆ.ಎಸ್.ಯು (ಐ) ಸರ್ಕಾರಿ ಯಂತ್ರದ ದುರುಪಯೋಗ ಪಡಿಸಿಕೊಂಡು ಚುನಾವಣೆಗೆ ಇಳಿದಿದ್ದರೂ ವಿದ್ಯಾರ್ಥಿಗಳು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಹಿಂದಿನ ವರ್ಷ ವಿದ್ಯಾರ್ಥಿ ಸಂಘವನ್ನು ನಡೆಸಿಕೊಂಡ ಭ್ರಷ್ಟ ನೀತಿಗೆ ವಿದ್ಯಾರ್ಥಿಗಳು ತಕ್ಕ ಪಾಠ ಕಲಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಬಂಗ್ಲಾ ದೇಶದಲ್ಲಿ ತೀವ್ರಗೊಳ್ಳುತ್ತಿರುವ ದಬ್ಬಾಳಿಕೆ

ಪಾಕಿಸ್ತಾನದ ದಬ್ಬಾಳಿಕೆಯಿಂದ ವಿಮೋಚನೆ ಗೊಳ್ಳುವ ಹೋರಾಟದಲ್ಲಿ ಬಂಗ್ಲಾದೇಶದಲ್ಲಿ ಭಾರತದ ಸೈನಿಕರು ರಕ್ತ ಸುರಿಸಿದ್ದೇವೆ, ಜೀವತೆತ್ತಿದ್ದೇವೆ. ಆದರೆ ಬಂಗ್ಲಾದೇಶದಲ್ಲಿ ಇಂದಿಗೂ ಸಂವಿಧಾನಾತ್ಮಕವಾದ ಪ್ರಜಾಪ್ರಭುತ್ವ ರೀತಿಯ ನಾಗರೀಕ ಹಕ್ಕುಗಳ ಪಾಲನೆಯ ಸರಕಾರವಿಲ್ಲದಾಗಿದೆ. ಜನರಲ್ ಎರ್ಶಾದರ ಸೈನಿಕ ಆಡಳಿತೆ ವಿರೋಧ ಪಕ್ಷಗಳ ಮೇಲೆ ಪ್ರತಿಬಂಧ ಹೇರಿ, ಅವರನ್ನೆಲ್ಲ ಬಂಧಿಖಾನೆಗಳಲ್ಲಿಟ್ಟು, ಸೈನಿಕರ ದಬ್ಬಾಳಿಕೆಯಿಂದಲೇ ಆಡಳಿತೆ ನಡೆಸುತ್ತ ಬಂದಿದೆ. ಆದರೆ ಚಿತ್ತಗಾಂಗ್ ಸಶಸ್ತ್ರ ಕ್ರಾಂತಿಯಂಥ ಧೀರ ಹೋರಾಟಗಳನ್ನು ಬ್ರಿಟಿಷ್ ಕಾಲದಲ್ಲೇ ನಡೆಸಿದ ಬಂಗ್ಲಾದೇಶದ ವೀರ ಕಾರ್ಮಿಕರೂ, ರೈತರೂ ವಿದ್ಯಾರ್ಥಿ ಯುವಜನ ಎರ್ಶಾದರ ಮಿಲಿಟರಿ ದಬ್ಬಾಳಿಕೆಯ ವಿರುದ್ಧ ಬಂಡೇಳುತ್ತಲೇ ಬಂದಿದ್ದಾರೆ. ವಿರೋಧ ಪಕ್ಷಗಳ ಐಕ್ಯ ಹೋರಾಟ ಬಲಗೊಳ್ಳುತ್ತಿದ್ದಂತೆಯೇ, ದಬ್ಬಾಳಿಕೆಯನ್ನು ತೀವ್ರಗೊಳಿಸಿದರೂ ಕೂಡ ಬಂಗ್ಲಾದೇಶದಲ್ಲಿ ಕಾರ್ಮಿಕರೂ, ವಿದ್ಯಾರ್ಥಿಗಳೂ, ಮುಷ್ಕರಗಳನ್ನು ಮುಂದುವರಿಸುತ್ತಿದ್ದಾರೆ.

ಜನರ ಹೋರಾಟವನ್ನು ದಬ್ಬಾಳಿಕೆಯಿಂದ ಶಮನಗೊಳಿಸಲು ಸಾಧ್ಯವಿಲ್ಲೆಂದು ಮನಗಂಡ ಸೈನಿಕ ಅಧಿಕಾರಿ ಮಾರ್ಚ್ 24 ರಂದು ಉಪಜಿಲ್ಲಾ ಸಮಿತಿಗಳಿಗೆ ಚುನಾವಣೆ ನಡೆಸುವುದಾಗಿಯೂ ಈ ಚುನಾವಣೆಯ ನಂತರ ಲೋಕಸಭೆ ಚುನಾವಣೆ ನಡೆಸುತ್ತೇನೆಂದೂ ಸಾರಿ, ಎಲ್ಲ ವಿರೋಧ ಪಕ್ಷಗಳು ಈ ಚುನಾವಣೆಯಲ್ಲಿ ಪಾಲ್ಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಅವಾಮಿ ಲೀಗ್ ಮತ್ತು ಬಂಗ್ಲಾದೇಶ ನ್ಯಾಶನಲ್ ಪಕ್ಷಗಳ ಮುಖಂಡತ್ವದಲ್ಲಿರುವ ವಿರೋಧ ಪಕ್ಷಗಳೆಲ್ಲ ಈ ವಿನಂತಿಯನ್ನು ನಿರಾಕರಿಸಿವೆ. ಮೇ 27 ಕ್ಕೆ ಲೋಕಸಭೆಯ ಚುನಾವಣೆ ನಡೆಸುತ್ತೇನೆಂದು ಮಿಲಿಟರಿ ಅಧಿಕಾರಿ ಘೋಷಿಸಿದ್ದು ಅದರಂತೆ ಲೋಕಸಭೆ ಚುನಾವಣೆ ಮುಗಿದ ನಂತರ, ಚುನಾಯಿತ ಸರಕಾರದ ನೇತೃತ್ವದಲ್ಲಿ ಉಪಜಿಲ್ಲಾ ಚುನಾವಣೆ ನಡೆಯಬೇಕೆಂದೂ, ಜಿಲ್ಲೆಯನ್ನು ವಿಭಜಿಸುವ ಅಧಿಕಾರ ಎರ್ಶಾದಿಗೆ ಇಲ್ಲೆಂದೂ ವಿರೋಧ ಪಕ್ಷಗಳ ವಾದ. ಚುನಾವಣೆಯ ಮೂಲಕ ಜನತಂತ್ರ, ಆಡಳಿತೆಯನ್ನ ಸ್ಥಾಪಿಸುತ್ತೇನೆಂದು ಮಿಲಿಟರಿ ಅಧಿಕಾರಿ ಹೇಳುತ್ತಿದರೂ ಕೂಡ ಉಪಜಿಲ್ಲಾ ಚುನಾವಣೆ ನಡೆಸಿ ವಿರೋಧ ಪಕ್ಷಗಳ ಉಮೇದುವಾರರಿಗೆ ಮತ ಬೀಳದಂತೆ ಕುತಂತ್ರ ನಡೆಸಿ ತನ್ನ ಅಧಿಕಾರವನ್ನು ಭದ್ರಗೊಳಿಸಿದ ನಂತರವೇ ಲೋಕಸಭೆ ಚುನಾವಣೆ ಮಾಡುವ ದುರುದ್ದೇಶ ಹೊಂದಿರುವುದು ಸ್ಪಷ್ಟವಾಗಿದೆ.

ಸೈನಿಕ ಆಡಳಿತೆಯನ್ನು ವಿರೋಧಿಸಲು ವಿರೋಧ ಪಕ್ಷಗಳು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

ಪೂರ್ವ ಪಾಕಿಸ್ಥಾನದ ಭಾಷೆ ಬಂಗಾಲಿ ಆಗಬೇಕೆಂದು 1952 ರಲ್ಲಿ ಚಳುವಳಿ ಮಾಡಿದಾಗ ಅಂದಿನ ಸರಕಾರದ ಗುಂಡಿಗೆ ತುತ್ತಾದ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸಲು ಫೆಬ್ರವರಿ 20 ರಂದು ಡಾಕಾ ವಿಶ್ವವಿದ್ಯಾಲಯದ ಆವರಣದಲ್ಲಿರುವ ಶಹೀದ ಮಿನಾರ್'ದ ಸುತ್ತ ಸಾವಿರಾರು ಜನ ನೆರೆದಾಗ ಸೈನಿಕ ಅಧಿಕಾರಿ ತನ್ನ ಏಜಂಟರನ್ನು ಉಪಯೋಗಿಸಿ ಕೈಬಾಂಬು, ಇತರ ಅಸ್ತ್ರಗಳ ಮೂಲಕ ಅಮಾನುಷ ಅತ್ಯಾಚಾರ ನಡೆಸಿದರು. ಇದರಿಂದಾಗಿ ನೂರಾರು ಜನರು ಜಖಂ ಆದರೂ ಐವತ್ತು ಸಾವಿರಕ್ಕೂ ಮೇಲ್ಪಟ್ಟು ನಾಗರೀಕರು ದಬ್ಬಾಳಿಕೆಯನ್ನೆದುರಿಸಿ ಬಂಗ್ಲಾದೇಶದ ರಾಜಧಾನಿಯಲ್ಲಿ ಮೆರವಣಿಗೆ ತೆಗೆದರು. ಅವಾಮಿ ಲೀಗಿನ ಮುಖ್ಯಸ್ಥೆ ಶ್ರೀಮತಿ ಹೊಸೀನಾ ವಝೇದ ಲೋಕಸಭಾ ಚುನಾವಣೆಗಿಂತ ಮುಂಚಿತವಾಗಿ ಉಪಜಿಲ್ಲಾ ಚುನಾವಣೆ ನಡೆಸುವುದರ ಪ್ರತಿಭಟನಾರ್ಥ ಮಾರ್ಚ 1 ರಂದು ಹರತಾಳ ಆಚರಿಸಬೇಕೆಂದು ಕರೆ ನೀಡಿದ್ದರು.

ಫೆಬ್ರವರಿ 20 ರಂದು ಡಾಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೂ, ಫೆ. 22 ರಂದು ರಾಜಶಾಹಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೂ ದಬ್ಬಾಳಿಕೆ ನಡೆದಾಗ, ಅದನ್ನು ವಿದ್ಯಾರ್ಥಿಗಳು ಪ್ರತಿಭಟಿಸಿದ ಕಾರಣ ಆ ವಿಶ್ವವಿದ್ಯಾಲಯವನ್ನು ಮುಚ್ಚಲಾಯಿತು. ಡಾಕಾದ ಹತ್ತಿರವಿರುವ ನಾರಾಯಣ ಗುಂಜದಲ್ಲಿರುವ ಆದಂಜೀ ಜ್ಯೂಟ ಗಿರಣಿಯ ಕಾರ್ಮಿಕರೆಲ್ಲ ಹರತಾಳ-ಮುಷ್ಕರದಲ್ಲಿ ಪಾಲ್ಗೊಳ್ಳಲು ರಸ್ತೆಗಿಳಿದಾಗ ಅವರ ಮೇಲೆ ಲಾಠಿ ಚಾರ್ಜು ಗೋಳಿಬಾರ್ ಮಾಡಲಾಯಿತು. ಇದಕ್ಕೆಲ್ಲ ಬೆದರದೆ ಕಾರ್ಮಿಕರು ಮುಷ್ಕರದಲ್ಲಿ ಸಹಭಾಗಿಗಳಾದರು.

ನಗರದ ಹಲವಾರು ಪ್ರದೇಶಗಳಲ್ಲಿ ಗೋಳಿಬಾರಾಯಿತು. ಹಲವಾರು ಜನರು ಸತ್ತರು. ಆದರೂ ಕೂಡ ಜನತೆ ಪೋಲೀಸ್ ದಬ್ಬಾಳಿಕೆಗೆ ಹೆದರಲಿಲ್ಲ. ಅವರ ಧೈರ್ಯ ಎಷ್ಟರ ಮಟ್ಟಿಗೆ ಹೋಗಿತ್ತೆಂದರೆ ಬಂಗ್ಲಾದೇಶ ಕೃಷಿಕ ಶ್ರಮಿಕ ಸಮಾಜವಾದಿ ಪಕ್ಷದ ಮುಖಂಡನನ್ನು ಪೋಲೀಸರು ಬಂಧಿಸಿದಾಗ, ಪೋಲೀಸರ ಬಂಧನದಿಂದ ಅವನನ್ನು ಬಿಡುಗಡೆ ಮಾಡಲಾಯಿತು. ಕೃಷಿ ವಿಶ್ವವಿದ್ಯಾಲಯದ ಪ್ರೊಫೆಸರರು, ಶಿಕ್ಷಕರು, ನೌಕರರು, ವಿದ್ಯಾರ್ಥಿಗಳೆಲ್ಲ ಮೆರವಣಿಗೆ ತೆಗೆದಾಗ ಪೋಲೀಸರು ಅವರ ಮೇಲೆ ಅತ್ಯಾಚಾರ ನಡೆಸಿದರು.

ಈ ರೀತಿಯ ಪೋಲೀಸ್ ದಬ್ಬಾಳಿಕೆ ಮುಂದುವರಿಯುತ್ತಿದ್ದರೂ ಕೂಡ, ಲೋಕಸಭೆ ಚುನಾವಣೆಯಾಗಬೇಕು. ಪ್ರಜಾಪ್ರಭುತ್ವ ಪುನಃ ಸ್ಥಾಪನೆಯಾಗಬೇಕು. ಸೈನಿಕ ಆಡಳಿತೆ ಕೂಡಲೇ ಕೊನೆಗೊಳ್ಳಬೇಕು ಎಂಬ ಬೇಡಿಕೆಗಳಸಲುವಾಗಿ ಹೋರಾಡಲು ಬಂಗ್ಲಾದೇಶದ ಜನತೆ ನಿರ್ಧಾರ ಮಾಡಿದೆ. ಆ ದಿಸೆಯಲ್ಲಿ ಧೀರ ಹೋರಾಟ ಮುಂದುವರಿಸಿದ್ದಾರೆ.

ದುಡಿಯುವ ಮಹಿಳೆಯರ ದಿನಾಚರಣೆ

ರಾಯಚೂರು

ಪಾರ್ಟಿ ರಾಜ್ಯ ಸಮಿತಿಯ ಕರೆಯ ಮೇರೆಗೆ ದಿನಾಂಕ 1-3-84 ರಿಂದ 11-3-84 ರವರೆಗೆ ರಾಯಚೂರಿನಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಗಿದೆ. 8ನೇ ಮಾರ್ಚ್ ದುಡಿಯುವ ಮಹಿಳೆಯ ದಿನಾಚರಣೆಯ ಅಂಗವಾಗಿ ಫಾರೂಕ್ ಅನ್ವರ ಕಂಪನಿ, ಆಗ್ರೋಮೋಟ್ರಿನ್ ರಾಯಚೂರು ಸ್ಟ್ವಾಲೆಂಟ್ ಕಾರ್ಖಾನೆಗಳಲ್ಲಿ ಗೇಟ್ ಮೀಟಿಂಗ್ ಮಾಡಿ ಅದೇ ರೀತಿ ಶಾಸ್ತ್ರಿ ನಗರ, ಕ್ಲಿಮಟನ್ ಮಾರ್ಕೆಟ್, ನಿಯಾತ ಲಾಬ್, ಜೆರೂನ್‌ಕಿಲ್ಲಾ ಇನ್ನಿತರ ಕೋಚೆ ಪ್ರದೇಶಗಳಲ್ಲಿ ಅನೇಕ ಸಭೆಗಳನ್ನು ಸೇರಿಸಿ ದಿನಾಚರಣೆಯ ಮಹತ್ವ, ದುಡಿಯುವ ಮಹಿಳೆಯರ ಸಮಸ್ಯೆಗಳು, ಸಂಘಟನೆಯ ಮಹತ್ವವನ್ನು ತಿಳಿಸಲಾಯಿತು. 11-3-84 ರಂದು ಮುಕ್ತಾಯ ಸಮಾರಂಭ ನಗರದ ಮಹಿಳಾ ಸಮಾಜದಲ್ಲಿ ಆಚರಿಸಲಾಯಿತು. 150 ಕ್ಕಿಂತಲೂ ಹೆಚ್ಚು ದುಡಿಯುವ ಮಹಿಳೆಯರು ಬೇಡಿಕೆಗಳೊಂದಿಗೆ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ತೆಗೆದರು. ಸ್ವಾಗತ ಭಾಷಣವನ್ನು ಶ್ರೀಮತಿ ಹರಿಣಿ ಕಕ್ಕೇರಿಯವರು ಮಾಡಿದರು. ಸಂಘಟನೆಯ ಗೊತ್ತುಗುರಿಗಳನ್ನು ಶ್ರೀಮತಿ ಸುಲೋಚನರವರೂ ಅಂತರರಾಷ್ಟ್ರೀಯ ದುಡಿಯುವ ಮಹಿಳೆಯ ದಿನಾಚರಣೆಯ ಹಿನ್ನೆಲೆ ಮತ್ತು ಮಹತ್ವವನ್ನು ಶ್ರೀಮತಿ ಮಂಜುಳಾ ಎಸ್. ಸಿ. ಯವರು ತಿಳಿಸಿದರು. ನಂತರ ಮಾತನಾಡಿದ ಶ್ರೀಮತಿ ಬಿ. ಟಿ. ಲಲಿತ ನಾಯಕರವರು ಅನಾದಿ ಕಾಲದಿಂದಲೂ ಮಹಿಳೆ ಒಂದು ವಸ್ತುವಾಗಿ ಪರಿಗಣಿಸಲ್ಪಟ್ಟಿದ್ದು ಎಲ್ಲಾ ರಂಗಗಳಲ್ಲಿ ಮುಂದೆ ಬರಬೇಕಾದರೆ ಮಹಿಳೆಗೆ ಆರ್ಥಿಕ ಸ್ವಾತಂತ್ರ, ಶಿಕ್ಷಣ ಅವಶ್ಯವೆಂದು ತಿಳಿಸಿದರು. ಶ್ರೀ ರಾಘವೇಂದ್ರ ಕುಷ್ಟಗಿಯವರು ಸಾಮಾಜಿಕ ಸಮಸ್ಯೆಗಳು ಮತ್ತು ಮಹಿಳೆಯರು ಎಂಬ ವಿಷಯದ ಬಗ್ಗೆ ಮಾತನಾಡಿದರು. ಮಹಿಳೆಯ ಮೇಲೆ ನಡೆಯುವ ದಬ್ಬಾಳಿಕೆ, ದೌರ್ಜನ್ಯಗಳಿಗೆ ಖಾಸಗಿ ಆಸ್ತಿ ಪದ್ಧತಿಯ ವ್ಯವಸ್ಥೆ ಇದ್ದ ಕಾರಣ ಶೋಷಿತಸ್ತ್ರೀಯರು ಶೋಷಿತ ಪುರುಷರೊಂದಿಗೆ ಹೋರಾಡಲು ಕರೆಕೊಟ್ಟರು. ಶ್ರೀಮತಿ ಶಕುಂತಲಗೋಪಶೆಟ್ಟಿಯವರು ಮಹಿಳೆಯರು ಮುಂದೆ ಬರಲು ಶಿಕ್ಷಣ ಅವಶ್ಯವೆಂದು ಒತ್ತಿ ಹೇಳಿದರು. ಶಿಕ್ಷಣದ ಅವಶ್ಯಕತೆ ಮತ್ತು ಪುರುಷರ ಸಹಕಾರ ಬೇಕು ಎಂದು ತಿಳಿಸಿದರು. ನಗರ ಸಭಾಸದಸ್ಯರಾದ ಶ್ರೀಮತಿ ಸುರೇಖಾ ಶಹಾರವರು ಮಹಿಳೆಯರು ಮುಂದೆ ಬರಲು ಸಣ್ಣ-ಪುಟ್ಟ ಉದ್ಯೋಗ ಮಾಡಬೇಕು. ಯಾವುದೇ ಸಮಸ್ಯೆಗೆ ಎಲ್ಲಾ ಮಹಿಳೆಯರು ಒಂದಾಗಬೇಕೆಂದು ಕರೆಕೊಟ್ಟರು. ನಂತರ ಮಾತನಾಡಿದ ರಜಿಯಾ ಬೇಗಂ, ಪಾರ್ವತಮ್ಮ, ಬೇಗಂ, ಬೇಗಂಬೀ ಈ ನಾಲ್ವರು ವರ್ಗಭೇಧ ಸಮಾಜದಲ್ಲಿ ಅತ್ಯಂತ ಹೀನ ಸ್ಥಿತಿಯಲ್ಲಿ ಒದ್ದಾಡುತ್ತಿರುವ ತಮ್ಮ ನೋವುಗಳನ್ನು ಸ್ಪಷ್ಟವಾಗಿ ಚಿತ್ರಿಸಿದರು.

ಶ್ರೀಮತಿ ಶ್ಯಾಮಲಾ ಪೂಜಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಪ್ರಭಾವತಿ ಹೇಮಾದ್ರಿಯವರು ವಂದನಾರ್ಪಣೆ ಮಾಡಿದರು.

ಬಿಜಾಪುರ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ದಿನಾಂಕ : 7-3-84 ರಂದು ಸಂಜೆ 4 ಗಂಟೆಗೆ ರಾಜ್ಯ ಸರ್ಕಾರಿ ಭವನ ವಿಜಾಪೂರದಲ್ಲಿ ಭಾರತ ಮಹಿಳಾ ಫೇಡರೇಶನ್, ಮಹಿಳಾ ಜನತಾ, ಎಸ್.ಎಫ್.ಐ. ಹಾಗೂ ಎ.ಐ.ಎಸ್.ಎಫ್., ಎ.ಐ.ವೈ.ಎಫ್. ಸಂಘಟನೆಗಳ ವತಿಯಿಂದ ವಿಚಾರ ಸಂಕಿರಣ ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು. ಈ ವಿಚಾರ ಸಂಕಿರಣಕ್ಕೆ ಉಪನ್ಯಾಸಕರಾಗಿ ಶ್ರೀಮತಿ ಶಾರದಾ ಮೊಳಿಬೆನ್ನೂರ ಬಳ್ಳಾರಿ (ಭಾರತ ಮಹಿಳಾ ಫೆಡರೇಶನ್ ರಾಜ್ಯ ಮಂಡಳಿಯ ಅಧ್ಯಕ್ಷರು) ಇವರು "ರಾಷ್ಟ್ರೀಯ ಐಕ್ಯತೆಯಲ್ಲಿ ಮಹಿಳೆಯ ಪಾತ್ರ" ಎಂಬ ವಿಷಯದ ಮೇಲೆ ಮಾತನಾಡುತ್ತ "ಸಹಸ್ರಾರು ವರ್ಷಗಳಿಂದ ಹೆಣ್ಣು ಮಕ್ಕಳ ತಲೆಯಲ್ಲಿ ಅಡಕವಾಗಿರುವ ಮೂಢ ನಂಬಿಕೆಗಳು ಜಾತೀಯತೆಗಳು ಹೋಗಬೇಕು ಹಾಗೂ ಬುದ್ಧಿ ಮತ್ತು ಆಲೋಚನಾ ಶಕ್ತಿಯಲ್ಲಿ ಗಂಡು ಮಕ್ಕಳಷ್ಟು ತಾವು ಶಕ್ತರಲ್ಲರೆಂಬ ಭಾವನೆ ಬಿಟ್ಟು ತಮ್ಮ ಮೇಲೆ ಜರುಗುತ್ತಿರುವ ಅನ್ಯಾಯ ಅತ್ಯಾಚಾರ ವೆಸಗುತ್ತಿರುವ ಸಮಾಜವನ್ನು ಪ್ರತಿಭಟಿಸಿ ತಮ್ಮ ಏಕೈಕ ಗುರಿಯಾದ ಸಮಾಜವಾದವನ್ನು ಮುಟ್ಟಬೇಕು .. ಎಂದು ಎಲ್ಲ ಮಹಿಳೆಯರಿಗೆ ಕರೆ ಕೊಟ್ಟರು.

ಎರಡನೇ ಉಪನ್ಯಾಸಕರಾಗಿ ಶ್ರೀಮತಿ ಜಯಲಕ್ಷ್ಮಿ ಯರನಾಳ, ಶಿಕ್ಷಕಿ ವಿಜಾಪೂರ ಇವರು 'ಜಾತ್ಯಾತೀತ ರಾಷ್ಟ್ರ ನಿರ್ಮಾಣದಲ್ಲಿ ಅಂತರ ಜಾತೀಯ ವಿವಾಹಗಳ ಮಹತ್ವ" ಎಂಬ ವಿಷಯದ ಮೇಲೆ ಮಾತನಾಡಿದರು ಹಾಗೂ ಶ್ರೀಮತಿ ಐನಾಪೂರ ಇವರು ಕೂಡಾ ಮಾತನಾಡಿದರು. ಸಭೆಯಲ್ಲಿ ಪ್ರಶ್ನೋತ್ತರಗಳು ನಡೆದವು ಅಸ್ಪೃಶ್ಯತೆಯ ವಿರುದ್ಧ ಹೋರಾಟ ಮಾಡಿ ಪದ್ಮಶ್ರೀ ಪಡೆದಂತಹ ಶ್ರೀ ಕಾಕಾ ಕಾರ್ಖಾನೀಸ ಅವರನ್ನು ವಿಶೇಷ ಆಮಂತ್ರಿತರೆಂದು ಆಹ್ವಾನಿಸಿ ಅವರನ್ನು ಸತ್ಕರಿಸಲಾಯಿತು. ಇದೇ ಸಂದರ್ಭದಲ್ಲಿ ಅಧ್ಯಕ್ಷರಿಂದ ಅಂತರ ಜಾತಿಯ ವಿವಾಹಿತ ದಂಪತಿಗಳಿಗೆ ಸನ್ಮಾನಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಎ. ಎಚ್. ಹಿಪ್ಪರಗಿಯವರು ವಹಿಸಿದ್ದರು. ಎಸ್.ಎಫ್.ಐ. ನ ಎಂ. ಬಿ. ಶೇಖ (ಬ್ಯಾಕೋಡ) ಅವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯವರಿಂದ ಚಲನ ಚಿತ್ರವನ್ನು ತೋರಿಸಲಾಯಿತು.

(5ನೇ ಪುಟದಿಂದ)

ಅಧಿಕಾರವು ಕೈಗೆ ಬಂದೊಡನೆ ಪಾರ್ಟಿಯಲ್ಲಿ ಸ್ಥಾಪಿತ ಹಿತಾಸಕ್ತಿಗಳೂ ನುಸುಳಿಕೊಂಡವು. ಸಾಮೂಹಿಕ ಸಂಘಟನೆಗಳ ಶಕ್ತಿ ಕ್ರಮೇಣಕ್ಷೀಣವಾಗತೊಡಗಿತು. ಅಸ್ತಿತ್ವದಲ್ಲಿದ್ದ ಸಂಘಟನೆಗಳೂ ತಮ್ಮ ಹೋರಾಟದ ಪರಂಪರೆಗಳನ್ನು ಉಳಿಸಿಕೊಂಡು ಕಾರ್ಮಿಕರಲ್ಲಿ ವರ್ಗಪ್ರಜ್ಞೆಯನ್ನು ಬೆಳೆಸಲು ಯಾವ ಪ್ರಯತ್ನವನ್ನೂ ಮಾಡದಿದ್ದುದರಿಂದ, ಕಾರ್ಮಿಕರ ವರ್ಗಪ್ರಜ್ಞೆಯು ಕ್ಷೀಣಿಸಿತು. ಸಮರಶೀಲ ಕಾರ್ಮಿಕರ ಬದಲು, ಕಾರ್ಮಿಕರ ದೈನಂದಿನ ಸಮಸ್ಯೆಗಳು ಮತ್ತು ಹೋರಾಟಗಳೊಂದಿಗೆ ಯಾವ ಸಂಬಂಧವೂ ಇಲ್ಲದ ಕೆಲವು ವಾಚಾಳಿಗಳು ಟ್ರೇಡ್ ಯೂನಿಯನುಗಳಲ್ಲಿ ಸೇರಿಕೊಂಡು ಜವಾಬ್ದಾರಿ ಸ್ಥಾನಗಳನ್ನು ಆಕ್ರಮಿಸಿ ಕೊಂಡರು. ಕಾರ್ಮಿಕ ಹೋರಾಟದ ಮುಂದಾಳುತ್ವದ ಬದಲು ನ್ಯಾಯಮಂಡಳಿಗಳನ್ನು, ವಕೀಲರನ್ನೂ ಆಶ್ರಯಿಸುವ ಅಭ್ಯಾಸ ಬೆಳೆಯಿತು. ಟ್ರೇಡ್ ಯೂನಿಯನುಗಳ ಬದಲು ಕೋರ್ಟುಗಳು ವರ್ಗ ಹೋರಾಟದ ಆಯುಧಗಳಾದವು.

(ಮುಂದಿನ ಸಂಚಿಕೆ ನೋಡಿ)

56 ನೆಯ ಕನ್ನಡ ಸಾಹಿತ್ಯ ಸಮ್ಮೇಳನ

(1ನೇ ಪುಟದಿಂದ)

ಮಾರ್ಚ್ 24 ರಿಂದ 27ರ ವರೆಗೆ ಸೇರಿದ ಸಮ್ಮೇಳನದಲ್ಲಿ ಕನ್ನಡ, ಇಂಗ್ಲಿಷ್ ಹಾಗೆಯೇ ಅಲ್ಪ ಭಾಷಿಕರ ಭಾಷೆ ಕನ್ನಡ ಚಳುವಳಿ ಸರಕಾರಿ ಆಡಳಿತೆಯ ಮಾಧ್ಯಮ ನೊದಲಾದ ಪ್ರಶ್ನೆಗಳ ಕುರಿತು ತುಮುಲಯುದ್ಧವೇ ನಡೆಯಿತು.

"ನಾನು ಇಂಗ್ಲೀಷ್ ಬೇಕು ಎನ್ನುವುದು ಕನ್ನಡದ ಹಿತಕ್ಕಾಗಿ, ನಮ್ಮ ಕನ್ನಡಜ್ಞಾನವಾಹಿನಿ ತುಂಬು ಹೊಳೆಯಾಗಿ ಮಹಾನದಿಯಾಗಿ ಹರಿಯ ಬೇಕಲ್ಲವೇ ? ಇಂಗ್ಲಿಷ್ ಉಪನದಿಯಾಗಿ ಕಾಣಿಕೆ ತರಲಿ, ಕನ್ನಡ ತಾಯಿಗೆ ಇಂಗ್ಲಿಷ್ ಸಾಮಂತ ಸ್ಥಾನದಲ್ಲಿದ್ದು ಕಪ್ಪ ಸಲ್ಲಿಸಲಿ" ಎಂದು ಹಿರಿಯ ಸಾಹಿತಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ. ಎ.ಎನ್. ಮೂರ್ತಿರಾವ್ ಅವರ ನುಡಿ ಜಗತ್ತಿನಲ್ಲೂ, ದೇಶದಲ್ಲೂ ಇರುವ ಎಲ್ಲ ಭಾಷೆಗಳ ಸಾಹಿತ್ಯಗಳಲ್ಲಿ ಹುದುಗಿಕೊಂಡಿರುವ ತಿರುಳನ್ನು ಕನ್ನಡ ಸಾಹಿತ್ಯದ ಭಾಷೆಯ ಸಿರಿವಂತಿಗೆಗಾಗಿ ಉಪಯೋಗಿಸಿಕೊಂಡು ಯಾವುದೇ ಭಾಷೆ, ಸಾಹಿತ್ಯದಲ್ಲಿ ದ್ವೇಷಾಸೂಯೆ ಸಲ್ಲದು, ಅವುಗಳೆಲ್ಲ ಒಂದಕ್ಕೊಂದು ಪೂರಕವಾಗಿರಬೇಕೆಂಬ ಉಚ್ಚ ಧ್ಯೇಯವನ್ನು ಹೊತ್ತಿರುವುದು "ಕನ್ನಡಕ್ಕಾಗಿ ಜೀವ ತೆರಲೂ ಸಿದ್ಧ" ಎಂದು ಘೋಷಿಸಿ, ಇತರ ಭಾಷಿಕರಲ್ಲಿ ಭೀತಿ ಉಂಟು ಮಾಡಿ ಹಿಂಸಾಚಾರಕ್ಕೆ ಅವಕಾಶ ಮಾಡಿ ಕೊಡುವ ಭಾಷೆಯ ದುರಭಿಮಾನಿಗಳಿಗೆ, ಮಾರ್ಗದರ್ಶನವಾಗಲೆಂದು ಹಾರೈಸೋಣ.

ಎಲ್ಲ ಹಂತಗಳಲ್ಲೂ ಕನ್ನಡಕ್ಕೆ ಮೊದಲಸ್ಥಾನ ಸಲ್ಲಬೇಕೆಂದು, ಕನ್ನಡ ನಾಡಿನಲ್ಲಿ ನೆಲೆಸುವವರು, ಮುಖ್ಯವಾಗಿ ಸರಕಾರಿ ನೌಕರಿಯಲ್ಲಿ ಸೇರುವ ಪ್ರತಿಯೊಬ್ಬನಿಗೂ ಕನ್ನಡ ಗೊತ್ತಿರಲೇಬೇಕೆಂದೂ, ಶಾಲೆ, ಕಾಲೇಜುಗಳಲ್ಲಿ ಹಾಗೆಯೇ ಶಿಕ್ಷಣದ ಎಲ್ಲ ಹಂತಗಳಲ್ಲಿ ಶಿಕ್ಷಣದ ಮಾಧ್ಯಮ ಕನ್ನಡವಾಗಬೇಕೆಂದೂ ಕೋರ್ಟು ಕಚೇರಿಗಳಲ್ಲೂ ವ್ಯವಹಾರ ಭಾಷೆ ಕನ್ನಡವೇ ಆಗಬೇಕೆಂದೂ ಒತ್ತಾಯಿಸಿದ ಮೂರ್ತಿರಾವ್ ಅವರು, ಈ ಗುರಿ ಸಾಧನೆಗಾಗಿ ನಡೆಯುವ ಯಾವುದೇ ಚಳುವಳಿಯಲ್ಲಿ ಹಿಂಸಾಚಾರ ಇರಬಾರದೆಂದೂ, ಭಾಷೆಗಾಗಿ ನಡೆಯುವ ಚಳುವಳಿ ಮಹತ್ವದ ವಿಷಯಗಳಿಂದ ಜನರನ್ನು ವಿಮುಖಗೊಳಿಸಬಾರದೆಂದೂ ಹೇಳಿ, ಭಾಷಾ ಚಳುವಳಿಯಿಂದ ಪ್ರಾಣ ಹಾನಿಯಾಯಿತೆಂದು ಕೇಳಿದಾಗ ನಾನೆಂದುಕೊಂಡೆ " ಕನ್ನಡಿಗ ಹೆಚ್ಚಿದ್ದ, ಕನ್ನಡ ಹೆಚ್ಚಿದ್ದ" ಎಂಬ ಉದ್ಗಾರ ಡಾ|| ರಾಜಕುಮಾರ್ ಮತ್ತು ಅವರ ಬೆಂಬಲಿಗರ ಹೃದಯಕ್ಕೆ ನಾಟಬಹುದೆಂದು ತಿಳಿಯೋಣವೇ ?

ಕನ್ನಡದ ಹೆಸರಲ್ಲಿ ನಡೆದ ಚಳುವಳಿಯ ಕಹಿ ಅನುಭವ ಉಂಡ ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರುಸಮ್ಮೇಳನದಲ್ಲಿ ಮುಖ್ಯಮಂತ್ರಿಗಳನ್ನೂ ಹಿರಿಯ ರಾಜಕಾರಣಿಗಳನ್ನೂ ಉಪಯೋಗಿಸಿ ಲಾಭ ಪಡೆಯುವ ರೀತಿ ಸರಿಯಲ್ಲೆಂಬುದನ್ನು ಬಯಲಿಗೆಳೆದರು. ನಾವು, ರಾಜಕಾರಣಿಗಳು ಕೆಲವು ಸಂದರ್ಭಗಳಲ್ಲಿ ಹಿಂದಿನ ಸಾಲುಗಳಲ್ಲಿ ಕುಳಿತು ಬೀಳಿಯವರ ಮಾತುಗಳನ್ನು ಕೇಳಬೇಕೆಂದೂ, ಮಾರ್ಮಿಕವಾಗಿ ನುಡಿದರು.

ಕನ್ನಡಕ್ಕಾಗಿ ನಡೆಯುವ ಚಳವಳಿ ಕುರಿತು ಮಾತಾಡುತ್ತ ವರ್ಷಕ್ಕೆ ಒಂದು ಸಾರಿ ಬೆಂಗಳೂರಿನಲ್ಲಿ ಕೂಗಾಡಿಬಿಟ್ಟರೆ ಕನ್ನಡದ ಉದ್ಧಾರ ಆಗುವುದಿಲ್ಲವೆಂದೂ ಹೇಳಿ, ನಮಗೆ ಸಂವಿಧಾನವಿದೆ. ನಾವು ಅದನ್ನು ಬಿಟ್ಟಿಲ್ಲ, ಅಂತರ್ಗತರಾಗಿದೇವೆ. ಎಷ್ಟು ಸಾಧ್ಯವೋ ಅಷ್ಟು ಕನ್ನಡ ಬೆಳೆಸೋಣ. ಆದರೆ ಭಾಷೆ, ಜಾತಿ, ಇನ್ನಾವುದೇ ವಿಷಯದಲ್ಲಿ ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಭಾವನೆಗಳನ್ನು ಕೆರಳಿಸುವುದು ಸರಿಯಲ್ಲ ಎಂದು ಹೆಗಡೆಯವರು ಎಚ್ಚರ ನೀಡಿದರು.

ಭೌಗೋಲಿಕ ಸಂಲಗ್ನತೆಯನ್ನು ಹೊಂದಿಕೊಂಡು ಭಾಷಾವಾರು ಪ್ರಾಂತ ರಚನೆಯ ಚಳುವಳಿ ನಡೆಯುವಾಗಾಗಲೀ, 1956ರಲ್ಲಿ ಕರ್ನಾಟಕ ರಾಜ್ಯ ಸ್ಥಾಪನೆಯಾದಾಗ ಹೊಸ ಪ್ರಾಂತಕ್ಕೆ ಕರ್ನಾಟಕವೆಂದು ನಾಮಕರಣ ಮಾಡುವ ಕುರಿತಾಗಲೀ, ಕನ್ನಡವೇ ಸರಕಾರದ ಎಲ್ಲ ಹಂತಗಳಲ್ಲೂ ಶಿಕ್ಷಣದಲ್ಲೂ, ರಾಜ್ಯಭಾಷೆಯಾಗಬೇಕೆಂಬ ವಿಷಯದಲ್ಲಾಗಲೀ ಕನ್ನಡ ಭಾಷೆಯ ಹೆಸರಿನಲ್ಲಿ ಅಲ್ಪ ಭಾಷಿಕರ ಮೇಲೆ ನಡೆದ ದಬ್ಬಾಳಿಕೆಯ ಕುರಿತಾಗಲೀ 3ನೇ 4ನೇ ದರ್ಜೆ ನೌಕರರನ್ನು ಸರಕಾರಿ ನೌಕರಿಯಲ್ಲಿ ಸೇರಿಸುವಾಗ ಈಗಿನ ಸರಕಾರ ಕನ್ನಡ ಕಲಿಯಲು ಅವರಿಗಿತ್ತ ಅವಕಾಶದ ಸಲುವಾಗಿಯಾಗಲೀ ಕನ್ನಡ ಸಾಹಿತ್ಯ ಪರಿಷತ್ತು ತನ್ನ ನಿಲುವನ್ನು ಸ್ಪಷ್ಟಪಡಿಸುವಲ್ಲಿ ಹಿಂದೇಟು ಹಾಕುತ್ತ ಬಂದಿದೆ.

ಅಗಿನ ಕಮ್ಯುನಿಸ್ಟ್ ಪಾರ್ಟಿ ಮತ್ತು ಈಗಿರುವ ಎರಡೂ ಕಮ್ಯುನಿಸ್ಟ್ ಪಾರ್ಟಿಗಳು ಮಾತ್ರ ಭಾಷೆ ಪ್ರಶ್ನೆ ಕುರಿತು ನಿರ್ದಿಷ್ಟ ನಿಲುವು ತಾಳಿವೆ. ಈ ವಿಷಯದ ಕುರಿತು ರಾಮಕೃಷ್ಣ ಹೆಗಡೆಯವರು ಕಟುವಾಗಿಯೇ ಉದ್ಧರಿಸಿದ್ದಾರೆ. ಕನ್ನಡಕ್ಕಾಗಿ ನಡೆಯುತ್ತಿರುವ ಚಳುವಳಿ ಕುರಿತ ಸಾಹಿತ್ಯ ಪರಿಷತ್ತು ತನ್ನ ನಿಲುವನ್ನು ಸ್ಪಷ್ಟಪಡಿಸಿಲ್ಲೆಂದು ದೇವೇಗೌಡರೇ ಆರೋಪಿಸಿದ್ದಾರೆ.

ಸಮಾಜ ಬದಲಾವಣೆಯಾಗುತ್ತಿದ್ದಂತೆಯೇ ಮನುಷ್ಯನ ಆಚಾರ-ವಿಚಾರಗಳ ಬದಲಾವಣೆಯಾಗುತ್ತದೆ. ಸರಕಾರ ಬದಲಾದಂತೆ ಆಡಳಿತೆಯಲ್ಲೂ ಪರಿವರ್ತನೆ ಕಂಡುಬರಬೇಕು. ಕನ್ನಡ ಭಾಷೆ, ಸಾಹಿತ್ಯ, ಕರ್ನಾಟಕದ ಗಡಿ ಮುಂತಾದ ಸಮಸ್ಯೆಗಳ ಕುರಿತು ಕಮ್ಯುನಿಸ್ಟ್ ಪಾರ್ಟಿಗಳಿಗಷ್ಟೆ ಸ್ಪಷ್ಟ ನಿಲುವು ಇರುತ್ತದೆ. ಇತರ ಬಂಡವಾಳಶಾಹಿ ಪಕ್ಷಗಳೆಲ್ಲ ಸಂದರ್ಭಕ್ಕನುಸಾರ ಒತ್ತಡಕ್ಕೆ ಬಲಿಯಾಗಿ ತಮ್ಮ ನಿಲುವಿನಲ್ಲಿ ಚಂಚಲತೆ ತೋರ್ಪಡಿಸುತ್ತವೆ.

ಕಳೆದ ಒಂದು ವರ್ಷದಲ್ಲಿ ಕನ್ನಡ ಭಾಷೆ, ಅದರ ಅನುಷ್ಠಾನದ ಕುರಿತು ಗೊಂದಲಮಯ ಪರಿಸ್ಥಿತಿ ಉಂಟಾಗಿರುವುದರಿಂದ ಕೈವಾರ ಸಾಹಿತ್ಯ ಪರಿಷತ್ತಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಂತ್ರಿಗಳೂ ಸಹಭಾಗಿಯಾದುದರಿಂದ ಆಡಳಿತೆಯಲ್ಲಿ ಕನ್ನಡ ಭಾಷೆಯ ಪಾತ್ರದ ಕುರಿತು ತುಮುಲ ಯುದ್ಧವಾಯಿತು. ಕನ್ನಡಕ್ಕಾಗಿ ನಡೆದ ಇತ್ತೀಚಿಗಿನ ಡಾ|| ರಾಜಕುಮಾರ್ ಬೆಂಬಲಿಗರ ಚಳುವಳಿ ಕುರಿತು ಪರಿಷತ್ತಿನ ಅಧ್ಯಕ್ಷರ ಹಾಗೆಯೆ ಮಂತ್ರಿಗಳ ಅಭಿಪ್ರಾಯ ಸರ್ವಸಾಮಾನ್ಯ ಒಂದಾದರೆ, ಪರಿಷತ್ತು ಕೈಗೊಂಡ ನಿರ್ಣಯ ತದ್ವಿರುದ್ಧವಾಗಿದೆ.

ಆದ್ದರಿಂದ ಪರಿಷತ್ತಿನ ಈ ನಿರ್ಣಯಗಳು ಕನ್ನಡಿಗರಿಗೆ ಹಾಗೆಯೇ ಕರ್ನಾಟಕದಲ್ಲಿ ನೆಲೆಸಿರುವ ಅಲ್ಪಭಾಷಿತರಿಗೆ ಒಪ್ಪಿಗೆಯಾಗಲಾರದೆಂದು ಹೇಳಬೇಕಾಗುತ್ತದೆ.

(1ನೇ ಪುಟದಿಂದ)

ಬಂದರು ಕಾರ್ಮಿಕರ – ಮುಷ್ಕರ

ರಿಗೆ ನ್ಯಾಯ ಸಂಬಳ ಕೊಡಲು ನಿರಾಕರಿಸುತ್ತಿದೆ. ಇದು ಇಂದಿರಾ ಸರಕಾರದ ದೇಶ ಪ್ರೇಮ. ಹೆಚ್ಚು ಸಂಬಳ ಬೇಡುವ ಕಾರ್ಮಿಕರೆಲ್ಲ ದೇಶದ್ರೋಹಿಗಳು.

ಈ ಮುಷ್ಕರದಿಂದ ದೇಶದ ಆರ್ಥಿಕ ಪರಿಸ್ಥಿತಿಗೆ ಸ್ವಲ್ಪ ಹಾನಿ ಉಂಟಾಗುತ್ತದೆಂದು ಎಲ್ಲರಿಗೂ ಗೊತ್ತು. ಆದರೆ ಅಂಥ ಪರಿಸ್ಥಿತಿಗೆ ಕೇಂದ್ರ ಸರಕಾರವೇ ಕಾರಣವಾಗಿದೆ.

ಇತ್ತೀಚೆಗೆ ನಡೆಯುತ್ತಿರುವ ಕಾರ್ಮಿಕರ ಹೋರಾಟಗಳಲ್ಲಿ ಕಾಂಗ್ರೆಸ್ ಕಾರ್ಮಿಕ ಸಂಘಟನೆಗಳೂ ಸೇರಿಕೊಳ್ಳುತ್ತಿರುವುದು ಸ್ವಾಗತಾರ್ಹ. ಇದರಿಂದ ಕಾರ್ಮಿಕರ ಐಕ್ಯತೆಯನ್ನು ಇನ್ನೂ ಬಲಗೊಳಿಸಲು, ಸರಕಾರದ ಮೇಲೆ ಹೆಚ್ಚು ಒತ್ತಾಯ ತರಲು ಸಹಾಯವಾಗುತ್ತಿದೆ. ಈ ಐಕ್ಯ ಹೋರಾಟದಿಂದ ಬಂದರು ಕಾರ್ಮಿಕರಿಗೆ ಜಯಸಿಗುವುದರಲ್ಲಿ ಸಂಶಯವಿಲ್ಲ.

1960 ರ ಲೆಕ್ಕದಲ್ಲಿ ಜೀವನ ಸೂಚ್ಯಾಂಕ 100 ರಂತೆ ಪರಿಗಣಿಸಿ ಕಾಲಾಂತರದಲ್ಲಿ ಅದು ರೂ. 1000 ದಷ್ಟಾಗಬೇಕೆಂದೂ, ಬೆಲೆ ಸೂಚ್ಯಾಂಕ ಹೆಚ್ಚಾದಾಗ ಅದನ್ನು ತಟಸ್ಥಗೊಳಿಸುವ ರೀತಿಯಲ್ಲಿ ಪ್ರತಿ ಸೂಚ್ಯಾಂಕಕ್ಕೆ ಕನಿಷ್ಟ ರೂ. 2 ಮನೆ ಬಾಡಿಗೆ ಮತ್ತು ನಗರ ಪರಿಹಾರ ಭತ್ಯೆ ಮೊದಲಾದ ಬೇಡಿಕೆಗಳಿಗಾಗಿ ಮುಷ್ಕರ ನಡೆಯುತ್ತಿದೆ.

ಸಂಬಳ, ತುಟ್ಟಿಭತ್ಯೆ, ಬದಲಾಗುತ್ತಿರುವ ತುಟ್ಟಿ ಭತ್ಯೆ, ವಿಶೇಷ ಸಂಬಳ, ಮತ್ತು ಅಲಾವನ್ಸ, ಎಕ್ಸಗ್ರೇಶಿಯಾ ಹಾಗೂ ನಿವೃತ್ತಿ ಸೌಲಭ್ಯಗಳನ್ನೊಳಗೊಂಡ 1982-83 ರಲ್ಲಿ ಬಂದರು ಕೆಲಸಗಾರರ ಒಟ್ಟು ವೇತನ ಬಿಲ್ಲು 183.44 ಆಗುತ್ತಿತ್ತು ಮಾರ್ಚ್ 13 ರಂದು ಚರ್ಚೆ ಮುರಿದು ಬಿದ್ದಾಗ ಮಂತ್ರಿಯವರು ರೂ. 32 ಕೋಟಿ ಕೊಡುತ್ತೇನೆಂದು ಹೇಳಿದ್ದರು. ಅದು ಒಟ್ಟು ವೇತನ ಬಿಲ್ಲಿನ ಶೇ 15 ರಷ್ಟಾಗುತ್ತಿದೆ.

ರೂ. 32 ಕೋಟಿಯಿಂದ ರೂ. 36 ಕ್ಕೋ. ರೂ. 40 ಕ್ಕೋ ಹೆಚ್ಚಿಸುವ ಸಂಭವವಿದೆ ಅದರ ಕುರಿತು ಚರ್ಚೆ ನಡೆಯುತ್ತಿದೆ. ಆದರೆ ನಗರ ಭತ್ಯೆ- ಮನೆ ಬಾಡಿಗೆ ಸರಕಾರ ಒಪ್ಪುತ್ತಿಲ್ಲ.

ಕಾರ್ಮಿಕ ಸಂಘಗಳ ರಾಜ್ಯ ಸಮಾವೇಶ

ಕೈಗಾರಿಕಾ ಘಟಕಗಳ ಮುಚ್ಚುವಿಕೆ, ಬೀಗಮುದ್ರೆ, ಲೇಆಫ್, ರಿಟ್ರೆಂಚ್‌ಮೆಂಟ್ ಮತ್ತು ಡೀನೋಟಿಫಿಕೇಷನ್‌ಗಳ ವಿರುದ್ಧ 1984 ಜನವರಿ 20ರಂದು ನವದೆಹಲಿಯಲ್ಲಿ ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿಯ ಆಶ್ರಯದಲ್ಲಿ ನಡೆದ ಅಖಿಲಭಾರತ ಸಮಾವೇಶವು ಕೊಟ್ಟಿದ್ದ ಕರೆಗೆ ಅನುಗುಣವಾಗಿ ಮಾರ್ಚ್ 18 ರಂದು ಕರ್ನಾಟಕ ರಾಜ್ಯ ಸಮಾವೇಶವು ಬೆಂಗಳೂರಿನಲ್ಲಿ ನಡೆಯಿತು. ವಿ. ಜೆ. ಕೆ. ನಾಯರ್ ಸ್ವಾಗತಿಸಿದರು.

ಸಿ. ನಂಜುಂಡಪ್ಪ (ಸಿಐಟಿಯು) ಎಂ.ಸಿ. ನರಸಿಂಹನ್ (ಎಐಟಿಯುಸಿ) ಅಲಂಪಲ್ಲಿ ವೆಂಕಟರಾಂ (ಬಿ.ಎಂ.ಎಸ್) ಇವರುಗಳನ್ನೊಳಗೊಂಡ ಅಧ್ಯಕ್ಷ ಮಂಡಳಿಯು ಸಮಾವೇಶದ ಕಲಾಪಗಳನ್ನು ನಡೆಸಿತು.

ಅಖಿಲಭಾರತ ಸಮಾವೇಶವು ಅಂಗೀಕರಿಸಿದ್ದ ನಿರ್ಣಯವನ್ನು ಎಂ.ಎಸ್. ಕೃಷ್ಣನ್ (ಎಐಟಿಯುಸಿ) ಮಂಡಿಸಿದರು. ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯ ಪರಿಸ್ಥಿತಿಯನ್ನು ಕುರಿತ ನಿರ್ಣಯವನ್ನು ಎಸ್. ಸೂರ್ಯನಾರಾಯಣರಾವ್ (ಸಿಐಟಿಯು) ಮಂಡಿಸಿದರು.

ಸಿಐಟಿಯು, ಎಐಟಿಯುಸಿ, ಬಿಎಂಎಸ್, ಎಚ್‌ಎಂಎಸ್ ಸಂಘಟನೆಗಳ ಜತೆಗೆ ಹಿಂದುಸ್ತಾನ್ ಏರೊನಾಟಿಕ್ ಎಂಪ್ಲಾಯೀಸ್ ಅಸೋಸಿಯೇಷನ್, ಐಟಿಐ ಎಂಪ್ಲಾಯೀಸ್ ಯೂನಿಯನ್ ಕೇಂದ್ರ ಸರಕಾರಿ ನೌಕರರ ಸಮನ್ವಯ ಸಮಿತಿ, ವಿಮಾನೌಕರರ ಸಂಘಗಳು, ಬ್ಯಾಂಕ್ ನೌಕರರ ಸಂಘಗಳು ಮೊದಲಾದ ಕಾರ್ಮಿಕ ಸಂಘಗಳಿಂದ ಪ್ರತಿನಿಧಿಗಳು ಬಂದಿದ್ದು, ಈ ಸಮಾವೇಶದಲ್ಲಿ 711 ಪ್ರತಿನಿಧಿಗಳು ಭಾಗವಹಿಸಿದ್ದರು.

ಏಪ್ರಿಲ್ 18ರಂದು ನವದೆಹಲಿಯಲ್ಲಿ ನಡೆಯುವ 'ಪಾರ್ಲಿಮೆಂಟ್ ಚಲೋ' ಕಾರ್ಯಕ್ರಮದಲ್ಲಿ ಕರ್ನಾಟಕದಿಂದ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲು ಜಿಲ್ಲಾ ಸಮಾವೇಶಗಳನ್ನು ನಡೆಸಲು ಈ ರಾಜ್ಯಸಮಾವೇಶವು ಕರೆಕೊಟ್ಟಿತು.

ಆಳಂದ ತಾಲ್ಲೂಕ್ ರೈತ ಸಂಘದ ಸಭೆ

ಆಳಂದ ತಾಲೂಕಿನ ಕರ್ನಾಟಕ ಪ್ರಾಂತ ರೈತ ಸಂಘದ ಸಭೆ ಲಾಡ. ಮುಗುಳಿಯಲ್ಲಿ 14-3-84ರಂದು ಶ್ರೀ ರೇವಪ್ಪ ಸೊಂಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಗೆ ಮುಖ್ಯ ಅತಿಥಿಗಳಾಗಿ ಕಾ|| ಮಹಮದ ಹಸನ್ ಖಾನ್ ಅವರು ಆಗಮಿಸಿದ್ದರು.

ಅಂದು ತಾಲ್ಲೂಕ್ ಘಟಕದ ಅಡ್‌ಹಾಕ್ ಸಮಿತಿಯನ್ನು ಕೆಳಕಂಡಂತೆ ರಚಿಸಲಾಯಿತು.

ಅಧ್ಯಕ್ಷರು: ಬಾಬು ಹಿರಮಶೆಟ್ಟಿ,
ಉಪಾಧ್ಯಕ್ಷರು: ನಾಗಪ್ಪ ಜೊಪಡೆ
ಪ್ರಧಾನ ಕಾರ್ಯದರ್ಶಿ: ಯಶ್ವಂತ ಹರಸೂರ, ಕಾರ್ಯದರ್ಶಿ: ಹಣಮಂತ ರಾಯ ಲಾಡವಂತಿ, ಸಂಘಟನಾ ಕಾರ್ಯದರ್ಶಿ: ಮೇಘರಾಜ ಕಠಾರೆ
ಖಜಾಂಚಿ: ಕಲ್ಲಪ್ಪ ಬೇಲಿ

ಚಂದ್ರಕಾಂತ ಕರಹರಿ, ಅರವಿಂದ ನಾಗೊರೆ, ಮಲ್ಲಿಕಾರ್ಜುನ ಹಳತೆ, ಬಾಸುಲಾಲ್ ಮೂಲಗಿ, ಬಾಲಯ್ಯ, ರೇಖುನಾಯಕ. ಶಂಕರ ನಾಯಕ್, ಧನಸಿಂಗ, ದೋಜುನಾಯಕ, ಅಪ್ಪಾರಾಯವಾಡೆ, ಮಾರುತಿ ಹೆಳವೆ, ಬಾಬು ದೊತರೆ, ಈರಪ್ಪ ಪೂಜಾರಿ ನಾಗಪ್ಪ ಕಾಳಗಿ ಇವರನ್ನೊಳಗೊಂಡ 21 ಸದಸ್ಯರ ಕಾರ್ಯಕಾರಿ ಸಮಿತಿ ರಚಿಸಲಾಯಿತು.

ಆಳಂದ ತಾಲ್ಲೂಕಿನಲ್ಲಿ ತೋಟಗಾರಿಕೆ ಕುರಿತು ಏಪ್ರಿಲ್ ತಿಂಗಳಲ್ಲಿ ಸಮಾವೇಶ ನಡೆಸಲು ತೀರ್ಮಾನಿಸಲಾಯಿತು.

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K V. Temple Street, Sultanpet. B-53. Phone : 24154
Editor : P. Ramachandra Rao Managing Editor : N. K. Upadhyaya